


# ಉಜ್ಜೀವನದಲ್ಲಿ ಒಂದು ಸಭೆ

“....ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಳಿಗೆ ಸೇರಿಸುತ್ತಿದ್ದನು''.
(ಅಪೊಸ್ತಲರ ಕೃತ್ಯಗಳು 2:47)

ಆಶಿಷ್ ರಾಯ್‌ಚೂರ್

ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಡಿಸೆಂಬರ್ 2012

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬ್ರೈಫೈಯ್ಡ್ ಡಿಸೈನ್ಸ್

Contact Information:
All Peoples Church & World Outreach
# 7M-319, 2nd Floor, 2nd Block
HRBR Layout, Kalyan Nagar, Bangalore 560 043
Karnataka, INDIA

Phone: +91-80-2354 4328, Extn. 35
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - A Church in Revival)

# ಉಜ್ಜೀವನ

# ಉಜ್ಜೀವನದಲ್ಲಿ ಒಂದು ಸಭೆ

“....ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಳಿಗೆ ಸೇರಿಸುತ್ತಿದ್ದನು’’.

(ಅಪೊಸ್ತಲರ ಕೃತ್ಯಗಳು 2:47)

# ವಿಷಯಸೂಚಿ


| | | |
|---|---|---|
| | ಪೀಠಿಕೆ | 1 |
| 1. | **ಯೆರೂಸಲೇಮಿನ ಸಭೆ** | **2** |
| | ಐಕ್ಯತೆ ಮತ್ತು ಪ್ರಾರ್ಥನೆಯಿಂದ ಜನಿಸಿದ್ದು | 2 |
| | 'ಇದು' 'ಅದೇ' | 4 |
| 2. | **ಉಜ್ಜೀವನದಲ್ಲಿ ಒಂದು ಸಭೆ** | **10** |
| | ಕರ್ತನು ಅವರ ಮಧ್ಯದಲ್ಲಿ ಬಿಡುಗಡೆಗೊಳಿಸುತ್ತಿದ್ದುದರಲ್ಲಿ ದಿನ ನಿತ್ಯವೂ ಮುಂದುವರೆಯಿತು | 10 |
| | ದಿನನಿತ್ಯದ ವೇಳಾಪಟ್ಟಿಯ ಮೇಲೆ ಸಂಪೂರ್ಣ ಪ್ರಭಾವ | 11 |
| | ಸಮುದಾಯದ ಪ್ರಜ್ಞೆ - ಒಟ್ಟಿಗೆ ಹಂಚಿಕೊಳ್ಳುವುದು | 12 |
| | ಸಭೆಯ ತ್ವರಿತ ಬೆಳವಣಿಗೆ | 13 |
| | ಹಿಂಸೆಗೊಳಗಾದ ಸಭೆಯ ಮುಂದುವರೆದ ಬೆಳವಣಿಗೆಗೆ ಕಾರಣವಾದ ಗಮನಾರ್ಹ ಅದ್ಭುತ ಕಾರ್ಯಗಳು | 13 |
| | ಹಿಂಸೆ (ಉಪದ್ರವ) | 14 |
| | ಪಾಪಕ್ಕೆ ಬಲವಾದ ನ್ಯಾಯತೀರ್ಪು | 15 |
| | ಪ್ರಕೃತ್ಯತೀತ ಪ್ರತ್ಯಕ್ಷಪಡಿಸುವಿಕೆ ಮತ್ತು ದೇವದೂತರ ಸಂದರ್ಶನಗಳು | 16 |
| | ಆಂತರಿಕ ತೊಂದರೆ ರಹಿತವಲ್ಲ | 16 |
| | ಪ್ರತಿಯೊಬ್ಬರು ಅದ್ಭುತಕರವಾಗಿ ಹರಿಯುತ್ತಿರುವುದು | 18 |
| | ಅಗ್ನಿಯು ಹರಡುತ್ತದೆ | 18 |

# ಪೀಠಿಕೆ

ಉಜ್ಜೀವನವು ದೇವರ ಸಂದರ್ಶನದ ಸಮಯವಾಗಿದೆ. ಇದು ಭೂಮಿಯ ಮೇಲೆ ಪರಲೋಕದ ಸುರಿಸುವಿಕೆಯ ಸಮಯವಾಗಿದೆ. ಸಂದರ್ಶನದ ಸಮಯದಲ್ಲಿ ವಿಷಯಗಳು ಭಿನ್ನವಾಗಿರುತ್ತದೆ! ನಾವು 2008 ನ್ನು ಪ್ರಾರಂಭಿಸುವಾಗ, ಈ ವರ್ಷವು ಆತ್ಮಿಕ ಮತ್ತು ಭೌತಿಕ ಸುರಿಸುವಿಕೆಯ ವರ್ಷವಾಗಿರುತ್ತದೆಂದು ಕರ್ತನಿಂದ ವಾಕ್ಯವನ್ನು ಪಡೆದೆವು. ಏನು ಸಂಭವಿಸಲಿದೆ ಎಂಬುದಾಗಿ ನಮಗೆ ತಿಳಿಯದೆ ಇದ್ದಾಗ್ಯೂ, ಈ ವರ್ಷವು ಸುರಿಸುವಿಕೆಯ ವರ್ಷವಾಗಿರುತ್ತದೆಂದು ದೇವರು ಹೇಳಿದ್ದು ಮಾತ್ರ ತಿಳಿದಿತ್ತು. ಅನಂತರ ವರ್ಷವು ಮುಂದುವರಿದಂತೆ ಅವುಗಳು ಜರುಗುವುದನ್ನು ನೋಡಲು ಪ್ರಾರಂಭಿಸಿದೆವು. ದೇವರು ವಾಗ್ದಾನ ಮಾಡಿದ ಉಜ್ಜೀವನಕ್ಕೆ ನಾವು ಈಗ ತಾನೇ ಮುಂದುವರೆಯುತ್ತಿದ್ದು ಆ ಉಜ್ಜೀವನವನ್ನು, ಸುರಿಸುವಿಕೆಯನ್ನು, ಪರಲೋಕದಿಂದ ಸುರಿಯುವ ಆ ವರ್ಷಾಕಾಲವನ್ನು ಸ್ವಾಗತಿಸಲು ನಮ್ಮ ಸ್ವಸ್ಥಾನಗಳಲ್ಲಿ ನಿಲ್ಲುತ್ತಿದ್ದೇವೆ.

ಉಜ್ಜೀವನದ ಸುರಿಸುವಿಕೆಯನ್ನು ಕಳುಹಿಸುವಂತೆ ದೇವರಲ್ಲಿ ನಾವು ಪ್ರಾರ್ಥಿಸುತ್ತಿದ್ದೇವೆ ಆದರೆ ಅದು ಜರುಗುವಾಗ ನಾವು ಅದಕ್ಕೆ ಸಿದ್ಧರಾಗಿರಬೇಕು!

ಉಜ್ಜೀವನವು ಉಂಟಾಗುವಾಗ ಸಭೆಯು ಹೇಗೆ ಕಾಣಿಸುತ್ತದೆ? ಪರಲೋಕದ ಸುರಿಸುವಿಕೆ, ದೇವರ ಆತ್ಮಿಕ ಸಂದರ್ಶನ ಸಮಯದಲ್ಲಿ ನಾವು ಅಲ್ಲಿರುವುದಾದರೆ ಏನು ಸಂಭವಿಸಬಹುದು? ನಾವು ಈಗ ತಿಳಿದಿರುವ ಸಭೆಯಂತೆ ಆಗ ಸಭೆ ಕಾಣಿಸದು. ನಾವು ಭಾನುವಾರದ ಸಭೆ ಸೇರಿಬಂದಾಗ, ಸಭಾಪಾಲಕರ ಪ್ರಸಂಗ ಮುಗಿಯುವರೆಗೂ ಕಾಯುತ್ತೇವೆ ಹಲವರು ಮಧ್ಯದಲ್ಲಿ ನಿದ್ದೆ ಮಾಡಬಹುದು, ಮನೆಗೆ ಹಿಂತಿರುಗರಬಹುದು. ಆದರೆ ದೇವರ ಸಂದರ್ಶನವಾಗುವ ಸಭೆಯು ಬಹು ಭಿನ್ನವಾಗಿರುತ್ತದೆ! ದೇವರ ಸುರಿಸುವಿಕೆಗೆ ಸಿದ್ಧರಾಗಿರ್ರಿ!

# 1

# ಯೆರೂಸಲೇಮಿನ ಸಭೆ

ದೇವರ ಚಲನೆಯುಂಟಾಗಿ ನಾವು ಅದರ ಮಧ್ಯದಲ್ಲಿರುವಾಗ ಸಭೆಯು ಹೇಗಿರುತ್ತದೆಂಬ ಚಿತ್ರಣ ಅಥವಾ ದರ್ಶನ ನೀಡುವುದೇ ಈ ಪುಸ್ತಕದ ಉದ್ದೇಶವಾಗಿದೆ. ಅಪೊಸ್ತಲರ ಕೃತ್ಯಗಳ ಮೊದಲ ಎಂಟು ಅಧ್ಯಾಯಗಳಲ್ಲಿ ಯೆರೂಸಲೇಮಿನಲ್ಲಿ ಉಂಟಾದ ಸಂದರ್ಶನವು ಯೆರೂಸಲೇಮಿನ ಸಭೆಗೆ ಜನ್ಮ ನೀಡಿದ ಕೆಲವು ಮುಖ್ಯ ವಿಷಯಗಳನ್ನು ಅಧ್ಯಯನ ಮಾಡೋಣ.

## ಐಕ್ಯತೆ ಮತ್ತು ಪ್ರಾರ್ಥನೆಯಿಂದ ಜನಿಸಿದ್ದು

ಪರಲೋಕದ ಸುರಿಸುವಿಕೆಗೆ ಮೊದಲು ಯೆರೂಸಲೇಮಿನಲ್ಲಿ ಸೇರಿಬಂದವರು ಮಾಡಿಕೊಂಡ ಉಜ್ಜೀವನದ ಪೂರ್ವಸೂಚಕವು ಏನಾಗಿತ್ತು? ಸುರಿಸುವಿಕೆಗಾಗಿ ಕಾದುಕೊಂಡಿರುವಂತೆ ಯೇಸುವು ತನ್ನ ಶಿಷ್ಯರಿಗೆ ಉಪದೇಶಿಸಿದ್ದನು. ಆತನು ಅವರಿಗೆ ನಿರ್ದಿಷ್ಟ ಸ್ಥಳ ಸೂಚಿಸಿ ಕಾದುಕೊಂಡಿರಲು ಹೇಳಿದ್ದನು. ಅಪೊಸ್ತಲರ ಕೃತ್ಯಗಳು 1:14 ರಲ್ಲಿ ಸುರಿಸುವಿಕೆಯ ಪೂರ್ವಸೂಚಕವು ಪ್ರಸ್ತಾಪಿಸಲ್ಪಟ್ಟಿದೆ.

**ಇವರೆಲ್ಲರು ಏಕ ಮನಸ್ಸಾಗಿ ದೇವರ ಪ್ರಾರ್ಥನೆಯಲ್ಲಿ ನಿರತರಾಗಿದ್ದರು. ಕೆಲವು ಮಂದಿ ಹೆಂಗಸರೂ ಯೇಸುವಿನ ತಾಯಿಯಾದ ಮರಿಯಳೂ ಆತನ ತಮ್ಮಂದಿರೂ ಅವರ ಸಂಗಡ ಇದ್ದರು.** (ಅಪೊಸ್ತಲರ ಕೃತ್ಯಗಳು 1:14)

ಎಲ್ಲಾ 120 ಶಿಷ್ಯರು ಯೆರೂಸಲೇಮಿನಲ್ಲಿ ಏಕಮನಸ್ಸಾಗಿ ಪ್ರಾರ್ಥನೆ ಮತ್ತು ವಿಜ್ಞಾಪನೆಯಲ್ಲಿ ನಿರತರಾಗಿದ್ದರು. ಇಲ್ಲಿ ಎರಡು ಅಂಶಗಳನ್ನು ಪಟ್ಟಿ ಮಾಡಬಹುದು. ಮೊದಲನೆಯದು ಅವರು ''ಏಕ ಸ್ವೀಕೃತಿಯಲ್ಲಿದ್ದರು'' ಅಂದರೆ ಏಕ ಮನಸ್ಸಾಗಿದ್ದರು. ಅವರು ಏಕಮನಸ್ಸಾಗಿ ಇದ್ದದ್ದು ಮಾತ್ರವಲ್ಲ ಏಕ ಮನಸ್ಸಾಗಿ ಮುಂದುವರೆದರು ಎಂಬುದಾಗಿ ಸತ್ಯವೇದವು ಹೇಳುತ್ತದೆ. ಆದುದರಿಂದ ಒಂದೇ ಮನಸ್ಸು, ಉದ್ದೇಶದ ಐಕ್ಯತೆ ಹೊಂದಿರುವುದು ಬಹಳ ಅವಶ್ಯಕ. ಒಂದೇ ವಿಷಯದ ಮುನ್ನಡೆಯು ದೇವರ ಸುರಿಸುವಿಕೆಯು ಒಳಗೆ ನಾವು ಬರಲು ಇರುವ ಪೂರ್ವಾಗತ್ಯವಾಗಿದೆ. ಏಕ ಮನಸ್ಸಿರುವ ಕಡೆ ದೇವರ ಸುರಿಸುವಿಕೆಯಿರುತ್ತದೆ ಮತ್ತು ಅಲ್ಲಿ ದೇವರು ಆತನ ಆಶೀರ್ವಾದಗಳಿಗೆ ಆಜ್ಞೆ ಕೊಡುತ್ತಾನೆ.

**ಆಹಾ ಸಹೋದರರು ಒಂದಾಗಿರುವದು ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು! ಅದು ಆರೋನನ ತಲೆಯ ಮೇಲೆ ಹಾಕಲ್ಪಟ್ಟು ಅವನ ಗಡ್ಡದ ಮೇಲೆಯೂ ಅಲ್ಲಿಂದ ಅವನ ಅಂಗಿಗಳ ಕೊರಳ ಪಟ್ಟಿಯವರೆಗೂ ಹರಿದು ಬರುವ ಶ್ರೇಷ್ಟತೈಲದಂತೆಯೂ ಹೆರ್ಮೋನ್ ಪರ್ವತದಲ್ಲಿ ಹುಟ್ಟಿ ಚೀಯೋನ್ ಪರ್ವತದ ಮೇಲೆ ಬೀಳುವ ಮಂಜಿನಂತೆಯೂ ಇದೆ. ಅಲ್ಲಿ ಆಶೀರ್ವಾದವೂ ಜೀವವೂ ಸದಾಕಾಲ ಇರಬೇಕೆಂದು ಯೆಹೋವನು ಆಜ್ಞಾಪಿಸಿದ್ದಾನೆ.** (ಕೀರ್ತನೆಗಳು 133:1-3)

ಇದರ ಅರ್ಥವೇನೆಂದರೆ, ನಾವು ದೇವರಿಗಾಗಿ ಆಶೆ ಹೊಂದಿರುವುದು ಮತ್ತು ಆತನನ್ನು ಅಧಿಕವಾಗಿ ಹೊಂದಬೇಕೆಂಬ ಅಪೇಕ್ಷೆಯ ಉದ್ದೇಶ ಹೊಂದಿರುವುದು, ಆತ್ಮನಲ್ಲಿ ಐಕ್ಯತೆ ಕಾಪಾಡಿಕೊಳ್ಳಲು ನಾನೂ, ನೀನೂ, ಪ್ರಯತ್ನಿಸುವುದು ಸುರಿಸುವಿಕೆಯ ಪೂರ್ವಭಾವಿ ವಿಧಾನವೆಂಬುದಾಗಿದೆ. ದೇವರನ್ನು ಹುಡುಕುವ ಉದ್ದೇಶದಿಂದ, ಸಣ್ಣ ವಿಚಾರಗಳ ಜಗಳವನ್ನು ತ್ಯಜಿಸಿ, ಸಿದ್ಧಾಂತಗಳ ಭಿನ್ನತೆಯಿಲ್ಲದೆ, ಹೆಸರು ಪಡೆಯಬೇಕೆಂಬ ಆಶೆ ಹೊಂದಿರದೆ, ಬೇರೆ ಬೇರೆ ಸಂಸ್ಥೆಯವರೆಂಬ ಬೇಧಭಾವಗಳಿಲ್ಲದೆ ದೇವ ಜನರು ಒಟ್ಟಾಗಿ ಸೇರಿಬರುವಾಗ ಅಲ್ಲಿ ಆತನ ಆತ್ಮನ ಬಲದ ಮತ್ತು ಪ್ರಸನ್ನತೆಯ ಸುರಿಸುವಿಕೆಯಿರುತ್ತದೆ. ಎಲ್ಲರ ಜೀವಿತಗಳಲ್ಲಿ, ಅಂಗಾಲಿನಿಂದ ತಲೆಯವರೆಗೂ, ಅತ್ಯಂತ ದೊಡ್ಡವರಿಂದ ಕನಿಷ್ಟರಾದವರಿಗೂ ಸುರಿಸುವಿಕೆಯ ಅಭಿಷೇಕ ಮತ್ತು ಆಶೀರ್ವಾದವಿರುತ್ತದೆ!

ಯೆರೂಸಲೇಮಿನಲ್ಲಿ ಒಗ್ಗಟ್ಟಾಗಿ ಸೇರಿದ ಸಭೆಯ ಎರಡನೆಯ ಪ್ರಮುಖ ಅಂಶವು ಪ್ರಾರ್ಥನೆ ಮತ್ತು ವಿಜ್ಞಾಪನೆಯಾಗಿದೆ. ಅವರು ಪ್ರಾರ್ಥನೆಯಲ್ಲಿ ವಿಜ್ಞಾಪನೆಯಲ್ಲಿ ಮತ್ತು ಮಧ್ಯಸ್ಥಿಕೆಯಲ್ಲಿ ಮುಂದುವರೆದರು. ದೇವರ ಸುರಿಸುವಿಕೆಯ ಮುನ್ಸೂಚನೆಯಿಂದಾಗಿ ಏಕಮನಸ್ಸಾಗಿ ಐಕ್ಯತೆಯಿಂದ ಪ್ರಾರ್ಥನೆ ಮತ್ತು ವಿಜ್ಞಾಪನೆಯನ್ನು ಅರ್ಪಿಸಿದರು.

ದೇವರನ್ನು ಅರಿಯದೇ, ಮುಂದಿನ ಐವತ್ತು ವರ್ಷಗಳು ಪ್ರತಿ ಭಾನುವಾರ 2 ಗಂಟೆ ಸಭೆಗೆ ಹಾಜರಾಗಿ ಕುಳಿತು, ಸಂದೇಶಗಳನ್ನು ಕೇಳಿ ಜ್ಞಾನವನ್ನು ಹೆಚ್ಚಿಸಿಕೊಂಡರೆ ಪ್ರಯೋಜನವೇನಿದೆ. ದೇವರ ಜ್ಞಾನದಲ್ಲಿ ಹೆಚ್ಚಾಗುವುದು ಮತ್ತು ಆತನನ್ನು ಅನುಭವಿಸುವುದು ಇವೆರಡು ಭಿನ್ನವಾಗಿವೆ. ಕ್ರೈಸ್ತತ್ವವು ಜ್ಞಾನದ ಮೇಲೆ ಆಧಾರಗೊಂಡಿಲ್ಲ. ಇದು ದೇವರೊಂದಿಗಿನ ಅನುಭವ. ಆತುರವಾದ ಸುಮ್ಮನೆ ಸಭೆಗೆ ಹಾಜರಾಗುವುದರಲ್ಲಿ ಯಾವುದೇ ಪ್ರಯೋಜನವಿಲ್ಲ, ದೇವರನ್ನು ಅಧಿಕವಾಗಿ ಹೊಂದಿಕೊಳ್ಳಲು ಗಾಢವಾದ ಅಪೇಕ್ಷೆ ಇರಬೇಕು.

''ದೇವರೇ ನಾವು ಒಂದೇ ಬಗೆಯ ಉದ್ದೇಶ ಹೊಂದಿದ್ದೇವೆ. ನಾವೆಲ್ಲರೂ ಇದರಲ್ಲಿ ಪರಿಪೂರ್ಣವಾಗಿದ್ದೇವೆ ಮತ್ತು ನಿನ್ನನ್ನು ಅಧಿಕವಾಗಿ ಅಪೇಕ್ಷಿಸುತ್ತೇವೆ''! ಎಂಬುದು ಸಭೆಯಾಗಿ ನಮ್ಮ ಪ್ರತಿಕ್ರಿಯೆಯಾಗಿರಬೇಕು ಹಾಗಿದ್ದರೂ, ನಾವು ಸ್ವಾರ್ಥ ಬಯಕೆ, ಸಂಶಯ, ಸ್ಪರ್ಧೆಗಳಿಂದ ದೂರವಿರಬೇಕು ಮತ್ತು ಅದರಿಂದ ನಮ್ಮನ್ನು ನಾವೇ ಕಾಪಾಡಿಕೊಳ್ಳಬೇಕು. ಯಾಕೆಂದರೆ ಸ್ವಾರ್ಥಬಯಕೆಯು ಸಂಶಯಕ್ಕೆ ನಡೆಸುತ್ತದೆ, ಸಂಶಯವು ಸ್ಪರ್ಧೆಗೆ ನಡೆಸುತ್ತದೆ. ಸ್ಪರ್ಧೆಯು ವಿಭಾಗಗಳನ್ನುಂಟುಮಾಡುತ್ತದೆ. ಇಂತಹ ಭಾವನೆಗಳಿಗೆ ಅವಕಾಶ ನೀಡಬಾರದು. ಯಾಕೆಂದರೆ ನಾವೇಲ್ಲರೂ ಏಕಮನಸ್ಸಾಗಿ ದೇವರು ಅಧಿಕವಾಗಿ ನಮಗೆ ಬೇಕೆಂಬ ಒಂದೇ ಉದ್ದೇಶದ ಅಪೇಕ್ಷೆಯನ್ನು ಹೊಂದಿದ್ದೇವೆ!

## ''ಇದು ಅದೇ''

**ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರು ಏಕಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು. ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ಧವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು. ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರೆಲ್ಲಾ ಒಬ್ಬೊಬ್ಬರಾಗಿ ಮೇಲೆ ಒಂದೊಂದಾಗಿ ಕೂತುಕೊಂಡವು. ಆಗ ಅವರೆಲ್ಲರೂ ಪವಿತ್ರಾತ್ಮಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು.** (ಅಪೊಸ್ತಲರ ಕೃತ್ಯಗಳು 2:1-4)

ಪಂಚಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರು ಏಕಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು. ಫಕ್ಕನೆ.... (ಅಪೊಸ್ತಲರ ಕೃತ್ಯ 2:1, 2 ಎ). ಅವರು ಐಕ್ಯತೆಯ ಉದ್ದೇಶದೊಡನೆ ಮುಂದುವರೆಯುತ್ತಿದ್ದರೆಂದು ಗಮನಿಸಬೇಕು. ಅವರೆಲ್ಲರೂ ಏಕಮನಸ್ಸಾಗಿದ್ದರು, ಒಂದೇ ಸ್ಥಳದಲ್ಲಿದ್ದರು ಮತ್ತು ಫಕ್ಕನೆ ಪರಲೋಕವು ತೆರೆಯಿತು. ದೇವರು ಅವರ ಮೇಲೆ ಬೆಂಕಿಯನ್ನು ಬಿಡುಗಡೆ ಮಾಡಿದರು. ಹೀಗೆ ಸುರಿಯೋಣವು ಪ್ರಾರಂಭಗೊಂಡಿತ್ತು! ಯೇಸುವು ವಾಗ್ದಾನ ಮಾಡಿದ್ದು ಇದೇ ಮತ್ತು ಇದು ಪ್ರಾರಂಭಗೊಂಡಿತ್ತು.

ಪಂಚಶತ್ತಮ ದಿನವನ್ನು ಆಚರಿಸಲು ಸಾವಿರಾರು ಯೆಹೂದ್ಯರು ಯೆರೂಸಲೇಮಿನಲ್ಲಿ ಕೂಡಿಬಂದಿದ್ದರು. ನೂರಾರು ಸಾವಿರಗಳಲ್ಲಿ ಯೆಹೂದ್ಯರ ಸಂಖ್ಯೆಯು ಇದ್ದಿರಬೇಕೆಂದು ಇತಿಹಾಸಗಾರರು ಹೇಳುತ್ತಾರೆ. ಆಗ

ಮೇಲ್ಮಾಳಿಗೆಯಲ್ಲಿದ್ದ ನೂರಿಪ್ಪತ್ತು (120) ಶಿಷ್ಯರೊಳಗೆ ಚಮತ್ಕಾರ ಜರುಗಿತು. ಅವರು ತಿಳಿಯದ ಅನ್ಯಭಾಷೆಗಳಲ್ಲಿ ಮಾತಾಡಲು ಪ್ರಾರಂಭಿಸಿದರು ಮತ್ತು ಸುದ್ದಿಯು ಹರಡಿತು. ಇವರು ಅನ್ಯಭಾಷೆಯಲ್ಲಿ ಪ್ರಾರ್ಥಿಸುವುದನ್ನು ಮತ್ತು ದೇವರನ್ನು ಮಹಿಮೆ ಪಡಿಸುವುದನ್ನು ನೋಡಿದವರು ಮತ್ತು ಕೇಳಿದವರು ತಕ್ಷಣವೇ ಹೊರಗೆ ದೊಡ್ಡ ಗುಂಪಾಗಿ ಕೂಡಿಬಂದರು. ಆಗ ಪೇತ್ರನು ಕೂಡಿಬಂದಂತಹ ದೊಡ್ಡ ಗುಂಪಿಗೆ ವಿವರಣೆಯ ಅಗತ್ಯವೆಂದು ಭಾವಿಸಿದನು. ಆದುದರಿಂದ ಅವನು ಎದ್ದು ನಿಂತು ''ಆದರೆ ಇದು ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿಸಿದ ಸಂಗತಿ ಅದೇನೆಂದರೆ .... (ಅಪೊಸ್ತಲರ ಕೃತ್ಯಗಳು 2:16) 'ಇದು ಅದೇ' ಎಂಬುದಾಗಿ ಹೇಳುವಾಗ ಹಳೇ ಒಡಂಬಡಿಕೆಯಲ್ಲಿ ಯೋವೇಲನು ಪ್ರವಾದಿಸಿದ್ದುದೇನು, ಯೆರೂಸಲೇಮಿನಲ್ಲಿ ಅಂದಿನ ದಿನದಲ್ಲಿ ನಡೆದಿದ್ದೇನು, ಎಂಬುದನ್ನು ಪೇತ್ರನು ಪವಿತ್ರಾತ್ಮ ಪ್ರೇರಿತನಾಗಿ ಹೇಳಿದನು.

**ತರುವಾಯ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು; ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು, ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವವು; ಇದಲ್ಲದೆ ಆ ದಿನಗಳಲ್ಲಿ ದಾಸದಾಸಿಯರ ಮೇಲೆಯೂ ನನ್ನ ಆತ್ಮವನ್ನು ಸುರಿಸುವೆನು** (ಯೋವೇಲ 2:28,29)

''ಪ್ರತ್ಯಕ್ಷವಾಗಿ ಪೇತ್ರನು ಹೇಳಿದ್ದದಾರು ಏನು? ''ಇದು ಅದೇ'' ಎಂಬುದಾಗಿ ಅವನು ಹೇಳಿದನು. ಆದರೆ ನಾವು ವಚನಭಾಗ ನೋಡುವಾಗ ''ಇದು'' ''ಅದಲ್ಲ'' ಎಂಬುದಾಗಿ ಅರ್ಥಮಾಡಿಕೊಳ್ಳಬಹುದು. ಯಾಕೆಂದರೆ ಯೋವೇಲನು ''ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವವರು ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವವು; ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು'' ಎಂಬುದಾಗಿ ಹೇಳಿದ್ದಾನೆ ಆದರೆ ನೂರಿಪ್ಪತ್ತು (120) ಮಂದಿ ಮಾಡುತ್ತಿದ್ದಾದರು ಏನು? ಅವರ ಮಧ್ಯದಲ್ಲಿ ಯಾವುದೇ ದರ್ಶನಗಳು, ಕನಸುಗಳು ಅಥವಾ ಪ್ರವಾದನೆಗಳಿರಲಿಲ್ಲ. ಅಲ್ಲಿ ಶಬ್ದದಿಂದ ಕೂಡಿದ್ದ ಬಿರುಗಾಳಿ, ಉರಿಯುತ್ತಿದ್ದ ನಾಲಿಗೆಗಳು ಮತ್ತು ಜನರು ಅನ್ಯ ಭಾಷೆಯುಗಳಲ್ಲಿ ಮಾತಾಡುತ್ತಿದ್ದುದು ಇದು ನಿಜವಾಗಿ ಜರುಗಿದ ಘಟನೆ. ಆದುದರಿಂದ ''ಇದು'' ನಿಜವಾಗಿ ''ಅದಲ್ಲ''! ನಾನು ವಿದ್ಯಾರ್ಥಿಗಳಿಗೆ ಅರ್ಥವಿವರಣಾಶಾಸ್ತ್ರ (ಹರ್ಮೇನಿಟಿಕ್ಸ್) ಬೋಧಿಸುವಾಗ - ವಚನ ಗ್ರಂಥವನ್ನು ಹೇಗೆ ಸರಿಯಾಗಿ ವ್ಯಾಖ್ಯಾನಿಸುವುದು, ಗ್ರೀಕ್ ಭಾಷೆ, ಇತಿಹಾಸ, ಆ ಕಾಲದ ಸಂಸ್ಕೃತಿ ಮುಂತಾದವುಗಳನ್ನು ಜಾಗರೂಕತೆಯಿಂದ ಅಧ್ಯಯನ ಮಾಡಿರಿ ಎಂದು ಹೇಳುತ್ತೇನೆ.

ಹೀಗೆ ನನ್ನ ಸ್ವಾಭಾವಿಕ ಮನಸ್ಸಿನಿಂದ ನಡೆಯುತ್ತಿರುವುದನ್ನು ವಿಶ್ಲೇಷಿಸಿದರೆ ''ಇದು ಅದಲ್ಲ'' ಎಂಬುದು ನನ್ನ ನಿರೂಪಣೆಯಾಗಿರುತ್ತದೆ. ಯೋವೇಲನು ''ಶಬ್ಧದಿಂದ ಕೂಡಿದ ಬಿರುಗಾಳಿ'' ಯ ಕುರಿತು ಮಾತನಾಡಲಿಲ್ಲ ''ಉರಿಯುವಂತಿರುವ ನಾಲಿಗೆಗಳು'' ಅಥವಾ ''ಅನ್ಯಭಾಷೆಗಳ ಮಾತಾನಾಡುವುದರ'' ಕುರಿತು ಪ್ರವಾದನೆ ಹೇಳಲಿಲ್ಲ. ಪಂಚಶತ್ತಮ ದಿನದಲ್ಲಿ ಆ ಸ್ಥಳದಲ್ಲಿ ಜರುಗಿದ ಸೂಚಕ ಕಾರ್ಯಗಳು ಯೋವೇಲನ ಪ್ರವಾದನಾ ಮಾತುಗಳಲ್ಲ. ಆದರೆ ಪೇತ್ರನ ಮೂಲಕ ಪವಿತ್ರಾತ್ಮನು ''ಇದು ಅದೇ'' ಎಂಬುದಾಗಿ ಹೇಳಿದ ಮಾತು ನನ್ನ ಜ್ಞಾನದ ವಿಶ್ಲೇಷಣೆಗೆ ಮಿಗಿಲಾದ ಅರ್ಥ ವಿವರಣೆ ಹೊಂದಿದೆ!

ಇಲ್ಲಿ ನಾವು ಎರಡು ಪ್ರಮುಖ ತೀರ್ಮಾನಗಳನ್ನು ಮಾಡಬೇಕು. ಮೊದಲನೆಯದು ದೇವರು ಆತನ ವಾಕ್ಯಕ್ಕಿಂತಲೂ ಸತ್ಯವೇದಕ್ಕಿಂತಲೂ (ಬೈಬಲ್ ಗಿಂತಲೂ) ದೊಡ್ಡವನು. ನಾವು ಹಲವು ಬಾರಿ ದೇವರನ್ನು ಆತನ ವಚನಕ್ಕೆ ಕೂಡಿಸಲು ಪ್ರಯತ್ನಿಸುತ್ತೇವೆ. ಆತನು ಬರೆದ ಪುಸ್ತಕಕ್ಕಿಂತಲೂ ದೇವರು ದೊಡ್ಡವನು. ಆತನು ಬರೆದ ಪುಸ್ತಕವು ಅಪರಿಮಿತ ದೇವರ ಬಗ್ಗೆ ಸ್ವಲ್ಪ ಭಾಗ ಮಾತ್ರ ವರ್ಣಿಸುತ್ತದೆ. ಸತ್ಯವೇದವು ಪರಿಪೂರ್ಣವಾದದ್ದು, ದೈವ ಪ್ರೇರಿತವಾದದ್ದು ಮತ್ತು ಭೂಮಿಯ ಮೇಲೆ ನಮ್ಮ ಜೀವಿತಗಳಿಗೆ ಕೊನೆಯ ಅಧಿಕಾರವಾಗಿದೆ ಎಂಬುದನ್ನು ನಾನು ಬಹಳವಾಗಿ ನಂಬುತ್ತೇನೆ. ಆದರೆ ಅಪರಿಮಿತನಾದ ನಮ್ಮ ದೇವರ ಬಗ್ಗೆ ಸತ್ಯವೇದವು ಸಂಪೂರ್ಣವಾಗಿ ವಿವರಿಸುವುದಿಲ್ಲವೆಂಬುದು ನನಗೆ ತಿಳಿದಿದೆ. ದೇವರು ಆತನ ವಚನಕ್ಕೆ ಎಂದಿಗೂ ಪ್ರತಿಯಾಗಿ ಹೇಳುವುದಿಲ್ಲ. ಆತನು ಪ್ರಕಟಿಸಿದ್ದಕ್ಕೆ ಆತನು ಯಾವಾಗಲೂ ಸತ್ಯವಾಗಿ ಇರುತ್ತಾನೆ. ಆದರೆ ಬರೆಯಲ್ಪಟ್ಟ ವಾಕ್ಯ ವಚನಗಳಿಗಿಂತ ಆತನು ಅಪರಿಮಿತವಾಗಿ ದೊಡ್ಡವನಾಗಿದ್ದಾನೆ.!

ಹಲವು ಬಾರಿ ನಾವು ಪರಿಶುದ್ಧ ಗ್ರಂಥಗಳನ್ನು ವಿಶ್ಲೇಷಿಸುವಾಗ, ''ಇದು'' ''ಅದು'' ಎಂಬ ಅರ್ಥವಾಗಿರುವುದಿಲ್ಲ. ಆದರೆ ''ಇದು ಅದೇ'' ಎಂಬುದಾಗಿ ದೇವರು ಹೇಳುತ್ತಾನೆ. ಯಾಕೆಂದರೆ ಯೋವೇಲನು ಆತ್ಮನ ಕೆಲಸಗಳ ಕುರಿತು ಮಾತಾಡುವಾಗ, ಆತ್ಮನ ಕೆಲಸಗಳ ಸರ್ವವ್ಯಾಪಕ ಪಟ್ಟಿಯನ್ನು ಕೊಡುತ್ತಿಲ್ಲ. ಅವನು ದರ್ಶನಗಳು, ಪ್ರವಾದನೆಗಳು ಮತ್ತು ಕನಸುಗಳನ್ನು ಪ್ರತಿನಿಧಿಸುವ ಪಟ್ಟಿಯನ್ನು ಮಾತ್ರ ನೀಡಿದ್ದಾನೆ. ಪಂಚಶತ್ತಮ ದಿನದಂದು ಜರುಗಿದ್ದು ಸಹ ಪವಿತ್ರಾತ್ಮನ ಕಾರ್ಯಗಳೇ ಆಗಿದೆ. ಶಬ್ದದಿಂದ ಕೂಡಿದ್ದ ಬಿರುಗಾಳಿ, ಉರಿಯಂತಿರುವ ನಾಲಿಗೆಗಳು,

ಮತ್ತು ಅನ್ಯಭಾಷೆಗಳಲ್ಲಿ ಮಾತಾನಾಡುತ್ತಿರುವ ಕಾರ್ಯಗಳು ಸಹ ಆತ್ಮನ, ಇತರ ಕೆಲಸಗಳಾಗಿವೆ. ಅವರು ಆತ್ಮನ ಕಾರ್ಯಗಳಿಂದ ಸ್ಥಿಮಿತಗೊಂಡಿದ್ದರು ಹೀಗೆ ''ಇದು ಅದೇ'' ಆಮೇನ್!

ಉಜ್ಜೀವನದಲ್ಲಿ ನಾವು ಜ್ಞಾನ ಮತ್ತು ಪ್ರಕಟನೆಯೊಡನೆ ನಡೆಯಬೇಕು. ನಮಗೆ ಎರಡೂ ಬೇಕಾಗಿದೆ ಕೆಲವೊಮ್ಮೆ ನಾವು ನಡೆಯುವುದಿಲ್ಲ. ನಮಗೆ ಪರಿಶುದ್ಧ ಗ್ರಂಥಗಳ ಎಲ್ಲಾ ಇತಿಹಾಸ ಗೊತ್ತಿದೆ ಇಬ್ರಿಯ, ಗ್ರೀಕ್ ಮತ್ತು ಇತರ ಪ್ರತಿಯೊಂದರದ್ದು. ನಾವು ಅನೇಕ ಬಾರಿ ''ಒಳ್ಳೆಯ ವಿಷಯಸಂಗತಿ'' ಯಾವುದು ಎಂಬುದಾಗಿ ತಿಳಿದಿದ್ದೇವೆ. ಆದರೆ ದೇವರ ಈಗಿನ ವಿಷಯ'' ಏನು ಎಂಬುದರ ಪ್ರಕಟನೆ ನಮಗಿರುವುದಿಲ್ಲ ಹೀಗೆ ''ಸರಿಯಾದ ವಿಷಯ'' ವಾದ ಬುದ್ದಲಿಯನ್ನು ನಾವು ಹೊಂದಿದ್ದೇವೆ, ಆದರೆ ''ಈಗಿನ ವಿಷಯ'' ವು ಹೊಸ ದ್ರಾಕ್ಷಾರಸವಾಗಿದೆ ನಮ್ಮ ಬುದ್ದಲಿಗಳು ಹೊಸದ್ರಾಕ್ಷಾರಸವನ್ನು ಇರಿಸಿಕೊಳ್ಳದಿದ್ದರೆ, ನಾವು ಹೊಸ ದ್ರಾಕ್ಷಾರಸ ಪಡೆಯುವುದಿಲ್ಲ. ದೇವರು ''ಈಗ'' ಮಾಡುತ್ತಿರುವುದೇನು, ಅದನ್ನು ಸ್ವಾಗತಿಸಲು ಮತ್ತು ಅದರಲ್ಲಿ ನಡೆದುಕೊಳ್ಳುವುದನ್ನು ಗ್ರಹಿಸಲು ನಮಗೆ ಜ್ಞಾನ ಮತ್ತು ಪ್ರಕಟನೆಗಳು ಅವಶ್ಯಕ ''ಈಗ'' ಎಂಬ ಪದವು ಖಚಿತವಾಗಿ ಬರೆಯಲ್ಪಟ್ಟ ವಾಕ್ಯಕ್ಕೆ ಎದುರು ನುಡಿಯುವುದಿಲ್ಲ. ಆದರೆ ದೇವರು ಏನನ್ನು ಮಾಡುತ್ತಿದ್ದಾನೆ ಎಂಬುದನ್ನು ಅರ್ಥಮಾಡಿಕೊಳ್ಳಲು ''ಈಗ'' ಎಂಬುದನ್ನು ನಾವು ಹೊಂದಿರಬೇಕು.

ಪ್ರೇತ್ರನ ''ಇದು'' ''ಅದೇ'' ಎಂಬುದರ ಮೇಲೆ ಆದರಿಸಿದ, ನಾವು ಹೇಳಬೇಕಾದ ಎರಡನೇ ಪ್ರಮುಖ ವಿಷಯವೇನೆಂದರೆ ಎರಡು ಉಜ್ಜೀವನಗಳು ಅಥವಾ ಸುರಿಸುವಿಕೆ ಒಂದೇ ವಿಧವಾದವಲ್ಲ! ಇವುಗಳಲ್ಲಿ ಸಮಾನರೂಪತೆ ಇರಬಹುದು ಆದರೆ ಅವುಗಳು ಒಂದೇ ವಿಧವಾದವು ಅಥವಾ ತದ್ರೂಪವಾದವಲ್ಲ, ಯೋವೇಲನು ದೇವರ ಆತ್ಮನ ಸುರಿಸುವಿಕೆಯನ್ನು ವರ್ಣಿಸಿದನು, ಪಂಚಶತ್ತಮ ದಿನದಲ್ಲಿ ದೇವರ ಆತ್ಮನ ಸುರಿಸುವಿಕೆ ಜರುಗಿತು. ದೇವರು, ''ಇದು ಒಂದು ಸುರಿಸುವಿಕೆ ಇದು ಸಂದರ್ಶನ (ಅಧಿಕೃತ ಭೇಟಿ)'' ಎಂಬುದಾಗಿ ಹೇಳಬಹುದು. ಆದರೆ ನಾವು ''ಇದು'' ನಿಶ್ಚಯವಾಗಿ ''ಅದರಂತೆ'' ಕಾಣಿಸುವುದಿಲ್ಲ ಎಂಬುದಾಗಿ ಹೇಳಬಹುದು! ನಾವು ಉಜ್ಜೀವನಗಳ ಇತಿಹಾಸದ ಘಟನೆಗಳನ್ನು ಅಧ್ಯಯನ ಮಾಡಬಹುದು ಪಾಠಗಳನ್ನು ಕಲಿಯಬಹುದು, ಉಜ್ಜೀವನಗಳ ಮಾದರಿಗಳನ್ನು ಶೇಖರಿಸಬಹುದು. ಆದರೆ ದೇವರನ್ನು ಒಂದು ಪೆಟ್ಟಿಗೆಯಲ್ಲಿ ಹಾಕಿಟ್ಟು ಇತರ ಸ್ಥಳಗಳಲ್ಲಿ ಜರುಗಿದ

ಮಾದರಿಯಲ್ಲಿಯೇ ಉಜ್ಜೀವನ ಜರುಗಬೇಕು ಎಂಬುದಾಗಿ ಹೇಳಲು ಸಾಧ್ಯವಿಲ್ಲ! ನಾವು ದೇವರ ಸುರಿಸುವಿಕೆಯ ಮುಂದುವರಿಕೆಯಲ್ಲಿ ದೇವರ ಮುಂದೆ ತೆರೆದವರಾಗಿರಬೇಕು. ದೇವರು ಈಗ ನಮ್ಮ ಮಧ್ಯದಲ್ಲಿ ಏನು ಮಾಡಬೇಕೆಂದಿದ್ದಾನೆಂದು ನಾವು ಅರ್ಥಮಾಡಿಕೊಳ್ಳಬೇಕು. ಸಭೆಯಾಗಿ ದೇವರು ನಮ್ಮನ್ನು ಯಾವುದಕ್ಕೆ ನಡೆಸುತ್ತಿದ್ದಾನೆ? ಈ ನಗರದ ಕುರಿತು ದೇವರ ಅಪೇಕ್ಷೆಯೇನು? ಎಂಬ ಪ್ರಶ್ನೆಗಳನ್ನು ನಮ್ಮನ್ನು ನಾವೇ ಕೇಳಿಕೊಳ್ಳಬೇಕು. ಪ್ರಪಂಚದ ಯಾವುದೋ ಒಂದು ಭಾಗದಲ್ಲಿ ದೇವರು ಮಾಡಿದ ಉಜ್ಜೀವನದ ಯಥಾರ್ಥ ಪ್ರತಿಕೃತಿಯ ನಿಖರತೆಯಂತೆ ನಮ್ಮ ನಗರದ ಉಜ್ಜೀವನ ಇರುವುದಿಲ್ಲ. ಇದು ಒಂದು ಹೊಸ ಉಜ್ಜೀವನವಾಗಿರುವುದು. ಆದಾಗ್ಯೂ ಇದು ದೇವರ ಸಂದರ್ಶನ, ಪರಲೋಕದಿಂದ ಸುರಿಯೋಣವಾಗಿದೆ!

ಅಪೊಸ್ತಲರ ಕೃತ್ಯಗಳು ಎರಡನೇ ಅಧ್ಯಾಯದಲ್ಲಿ ಈ ಒಂದು ಸುರಿಸೋಣದ ಫಲಿತಾಂಶದಿಂದ ಸಭೆಯು ಜನ್ಮತಾಳಿತೆಂದು ನಾವು ನೋಡುತ್ತೇವೆ. ಇದು ಮೊದಲ ಸ್ಥಳೀಯ ಸಭೆಯಾಯಿತು.

**ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನ ಮಾಡಿಸಿಕೊಂಡರು ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು.** (ಅಪೊಸ್ತಲರ ಕೃತ್ಯಗಳು 2:41)

ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು! ಹಲವು ಬಾರಿ ನಾವು ಅದು ಹೇಗಿದ್ದಿರಬಹುದು ಎಂಬುದಾಗಿ ಕಲ್ಪಿಸಿಕೊಳ್ಳಲು ಪ್ರಯತ್ನಿಸುತ್ತೇವೆ ಅಪೊಸ್ತಲರ ಸ್ಥಿತಿಯಲ್ಲಿ ತಾನು ಇರುವುದು ಹೇಗಿರಬಹುದು! ಯಾವುದೇ ವಿದ್ಯಾಸಂಸ್ಥೆಯಿಂದ ಅವರು ಪದವಿ ಪಡೆದಿರಲಿಲ್ಲ, ''ಸಭಾ ಕೆಲಸ ನಿರ್ವಹಣೆ'', ''ಸಭೆಯ ಬೆಳವಣಿಗೆಯ ಮೂಲತತ್ವ'' ಗಳಲ್ಲಿ ಬೋಧನೆಗಳನ್ನು ಹೊಂದಿರಲಿಲ್ಲ. ಆದಾಗ್ಯೂ ದಿನಬೆಳಗಾಗುವುದರಲ್ಲಿ ಒಂದೇ ಸುಮಾರು ಮೂರುಸಾವಿರ ಸಭಾಸದಸ್ಯರನ್ನು ಅವರು ಹೊಂದಿದ್ದರು ಅಲ್ಲಿ ಯೋಜನೆಗಳಿರಲಿಲ್ಲ, ಕೌಶಲ್ಯಯುತವಾಗಿರಲಿಲ್ಲ, ಪೂರ್ವಉಪದೇಶಗಳಿರಲಿಲ್ಲ ಅನುಸರಿಸಲು ಯಾವುದೇ ಮಾದರಿಯಿರಲಿಲ್ಲ, ಜಿ. 12 (ಹನ್ನೆರಡು) ಪ್ರಾರ್ಥನಾ ಗುಂಪುಗಳಿರಲಿಲ್ಲ - ಏನೂ ಇರಲಿಲ್ಲ ಆದರೆ ಒಂದು ಕ್ಷಣದಲ್ಲೇ ಸಭೆಯು ಜನಿಸಿತು.

ನಾನು ಕಲಿಯುವುದರ ಅಥವಾ ಯೋಜನೆಗಳ ಅಥವಾ ಕೌಶಲ್ಯತೆಗಳನ್ನು ಕಡಿಮೆ ಮಾಡುತ್ತಿಲ್ಲ ಬದಲಾಗಿ ''ಆಕಸ್ಮಿಕವಾಗಿ ದೇವರು ಏನಾದರೊಂದನ್ನು ಮಾಡಿದರೆ, ಅದರೊಂದಿಗೆ ನಾವು ಹೋಗೋಣ'' ಎಂಬುದನ್ನು ನಮ್ಮ ಹೃದಯಗಳಿಗೆ ಮುದ್ರಿಸುವ ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ. ನಮ್ಮ ಯೋಜನೆಗಳು ಮತ್ತು ನಮ್ಮ ನಯ ಕೌಶಲ್ಯತೆಯೆಡಗೆ ದೇವರು ಯಾವಾಗಲು ಬರಬೇಕೆಂಬುದಲ್ಲ! ವಿದ್ಯಾವಂತ ಜನರಾಗಿ, ನಮ್ಮ ಮಿದುಳುಗಳನ್ನು ಬಹಳವಾಗಿ ಉಪಯೋಗಿಸುವುದು ಅಭ್ಯಾಸವಾಗಿದೆ ಮತ್ತು ಇಲ್ಲಿಯೇ ಮಾಡುತ್ತಿರುವವುಗಳ ಬಗ್ಗೆ ಗ್ರಹಿಸಲು ಪ್ರಯತ್ನಿಸುವುದರಲ್ಲಿ ನಮ್ಮ ಪ್ರಯಾಸಗಳು ಪ್ರಾರಂಭವಾಗುವದು. ಅನೀರಿಕ್ಷಿತವಾಗಿ ದೇವರು ಏನಾದರೊಂದು ಮಾಡಲು ಮುಂದುವರಿದರೆ ನಾವು ಅದರೊಂದಿಗೆ ಹೋಗಬೇಕು!

# 2

# ಉಜ್ಜೀವನದಲ್ಲಿ ಒಂದು ಸಭೆ

ಯೆರೂಸಲೇಮಿನ ಸಭೆಯು ಉಜ್ಜೀವನದಲ್ಲಿ ಜನಿಸಿತು. ಆದುದರಿಂದ ಉಜ್ಜೀವನದಲ್ಲಿ ಸಭೆಯು ಯಾವ ರೀತಿಯಲ್ಲಿ ಕಾಣಿಸುತ್ತದೆ ಎಂದು ಅರ್ಥಮಾಡಿಕೊಳ್ಳಲು ಇದು ಒಂದು ಮಹತ್ತರವಾದ ಮೊದಲ ಮಾದರಿಯಾಗಿದೆ. ಸುರಿಸುವಿಕೆ ಮತ್ತು ಉಜ್ಜೀವನದ ಅನುಭವವನ್ನು ನಾವು ಪಡೆಯುವಾಗ, ನಾವು ನಿರೀಕ್ಷಿಸುವವುಗಳ ಬಗ್ಗೆ ಕೆಲವು ಪಾಠಗಳನ್ನು ಕಲಿಯಬಹುದು.

## ಕರ್ತನು ಅವರ ಮಧ್ಯದಲ್ಲಿ ಬಿಡುಗಡೆಗೊಳಿಸುತ್ತಿದ್ದುದರಲ್ಲಿ ದಿನ ನಿತ್ಯವೂ ಮುಂದುವರೆಯಿತು

**ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವದರಲ್ಲಿಯೂ, ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು. ಎಲ್ಲರಿಗೂ ಭಯ ಉಂಟಾಯಿತು, ಇದಲ್ಲದೆ ಅನೇಕ ಅದ್ಭುತಕಾರ್ಯಗಳೂ ಸೂಚಕಕಾರ್ಯಗಳೂ ಅಪೊಸ್ತಲರ ಕೈಯಿಂದ ನಡೆದವು. ನಂಬಿದವರೆಲ್ಲರು ಒಗ್ಗಟ್ಟಾಗಿದ್ದು ತಮ್ಮದೆಲ್ಲವನ್ನೂ ಹುದುವಾಗಿ ಅನುಭೋಗಿಸುತ್ತಾ ತಮ್ಮ ತಮ್ಮ ಚರಸ್ಥಿರ ಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ ಅವರವರ ಅಗತ್ಯವಿದ್ದ ಹಾಗೆ ಹಂಚಿಕೊಡುತ್ತಾ ಇದ್ದರು. ಅವರು ದಿನಾಲು ಏಕಮನಸ್ಸಿನಿಂದ ದೇವಾಲಯದಲ್ಲಿ ಕೂಡುತ್ತಾ ಮನೆಮನೆಗಳಲ್ಲಿ ರೊಟ್ಟಿಮುರಿದು ಉಲ್ಲಾಸದಿಂದಲೂ ಸರಳ ಹೃದಯದಿಂದಲೂ ಊಟಮಾಡುತ್ತಾ ಇದ್ದರು; ದೇವರನ್ನು ಕೊಂಡಾಡುವವರಾಗಿಯೂ ಜನರೆಲ್ಲರ ದಯವನ್ನು ಹೊಂದುವವರಾಗಿಯೂ ಇದ್ದರು ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು.** (ಅಪೊಸ್ತಲರ ಕೃತ್ಯಗಳು 2:42-47)

ಕರ್ತನು ಅವರ ಮಧ್ಯದಲ್ಲಿ ಬಿಡುಗಡೆ ಮಾಡುತ್ತಿದ್ದುದರಲ್ಲಿ ವಿಶ್ವಾಸಿಗಳು ದಿನಾಲು ಮುಂದುವರೆದರು ಎಂಬುದನ್ನು ನಾವು ಗಮನಿಸುತ್ತೇವೆ.

**ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವದರಲ್ಲಿ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು** (ಅಪೊಸ್ತಲರ ಕೃತ್ಯಗಳು 2:42)

**ಅವರು ದಿನಾಲು ಏಕಮನಸ್ಸಿನಿಂದ ದೇವಾಲಯದಲ್ಲಿ ಕೂಡುತ್ತಾ ಮನೆಮನೆಗಳಲ್ಲಿ ರೊಟ್ಟಿ ಮುರಿದು ಉಲ್ಲಾಸದಿಂದಲೂ ಸರಳ ಹೃದಯದಿಂದಲೂ ಊಟಮಾಡುತ್ತಾ ಇದ್ದರು;** (ಅಪೊಸ್ತಲರ ಕೃತ್ಯಗಳು 2:46)

**ಪ್ರತಿದಿನ ಎಡೆಬಿಡದೆ ದೇವಾಲಯದಲ್ಲಿಯೂ ಮನೆಮನೆಯಲ್ಲಿಯೂ ಉಪದೇಶ ಮಾಡುತ್ತಾ ಕ್ರಿಸ್ತನಾದ ಯೇಸುವಿನ ವಿಷಯವಾದ ಶುಭವರ್ತಮಾನವನ್ನು ಸಾರುತ್ತಾ ಇದ್ದರು.** (ಅಪೊಸ್ತಲರ ಕೃತ್ಯಗಳು 5:42)

ಯೆರೂಸಲೇಮಿಗೆ ಚಿಕ್ಕ ಪ್ರಯಾಣದ ಯೋಜನೆ ಮಾಡಿದ್ದ ಜನರು ತಕ್ಷಣ ಪ್ರತಿದಿನವು ಜರುಗುತ್ತಿದ್ದವುಗಳಲ್ಲಿ ಸೇರಿಕೊಂಡರು. ಇದು ನಾವು ಭಾನುವಾರದ ಆರಾಧನೆ ಕೂಟಕ್ಕೆ ಹೋಗುವುದಕ್ಕೆ ಹೋಲಿಕೆಯಾಗಿದೆ ಸಭೆಯಲ್ಲಿ ಯಾವುದೋ ಒಂದು ಸಾರಿ ವಿಶೇಷ ಕೂಟಗಳಿಗೆ ಹಾಜರಾಗುವುದರಿಂದ ನಾವು ಯೋಜಿಸಿದ್ದವುಗಳಲ್ಲಿ ಶಾಂತ ಜೀವನ ನಡೆಸುತ್ತೇವೆ. ಆದರೆ ಉಜ್ಜೀವನದಲ್ಲಿ, ಪ್ರತಿದಿನವೂ ಏನಾದರೊಂದು ಆಗುತ್ತಿರುತ್ತದೆ.! ಯೆರೂಸಲೇಮಿನ ಸಭೆಯು ಕರ್ತನು ಅವರ ಮಧ್ಯದಲ್ಲಿ ದಿನಾಲು ಮಾಡುತ್ತಿದ್ದವುಗಳಲ್ಲಿ ಮುಂದುವರೆಯಿತು - ಅವರು ಏಳು-ದಿನಕ್ಕೆ ಒಂದು ಬಾರಿ ವಿಷಯದಲ್ಲಿರದೆ ಪ್ರತಿದಿನವು ಅದರಲ್ಲಿ ಹರಿಯುತ್ತಿದ್ದರು.

## ದಿನನಿತ್ಯದ ವೇಳಾಪಟ್ಟಿಯ ಮೇಲೆ ಸಂಪೂರ್ಣ ಪ್ರಭಾವ

ಅವರ ಪ್ರತಿದಿನದ ವೇಳಾಪಟ್ಟಿ ಪೂರ್ಣವಾಗಿ ಬದಲಾದದ್ದನ್ನು ಕಲ್ಪಿಸುವುದು ಬಹಳ ಸುಲಭವಾಗುತ್ತದೆ. ಉಜ್ಜೀವನದಲ್ಲಿ ನಮ್ಮ ವೇಳಾಪಟ್ಟಿಯು ಪ್ರಭಾವಿತಗೊಳ್ಳುತ್ತದೆ.! ಇದು ಸ್ವಲ್ಪ ''ಅವ್ಯವಸ್ಥೆ'' ಕೂಡ ಉಂಟು ಮಾಡಬಹುದು. ಯೆರೂಸಲೇಮಿನಲ್ಲಿನ ಜನರು ಮುಂಗಡವಾಗಿ ಪ್ರಯಾಣದ ಯೋಜನೆ ಮಾಡಿದ್ದಿರಬಹುದು. ಒಂದು ದಿನ ಬೆಳಿಗ್ಗೆ ಹೊರಟು ಪಂಚಶತ್ತಮ ದಿನದಂದು ಅಲ್ಲಿದ್ದು ಹಬ್ಬ ಮುಗಿಸಿ ಮಾರನೆಯ ದಿವಸ ಹಿಂತಿರುಗಲು ಮತ್ತು ಪ್ರಾಯಶಃ ಅದರ ಮರು ದಿನದಲ್ಲಿ ಕೆಲಸದಲ್ಲಿ ಕಾಣಿಸಿಕೊಳ್ಳಲು ಯೋಜನೆ ಮಾಡಿದ್ದಿರಬಹುದು! ಇದನ್ನು ಗಮನಿಸಿರಿ: ಯೆರೂಸಲೇಮಿಗೆ ಬಂದರು ಅಲ್ಲಿ ದೇವರ ಅಪಾರವಾದ ಸುರಿಸುವಿಕೆ ಉಂಟಾಯಿತು! ಅವರ ಜೀವಿತಗಳಲ್ಲಿ ಸ್ಪರ್ಶ ಉಂಟಾಗಿ ಮೂರು ಸಾವಿರ ಜನರು ರಕ್ಷಣೆ ಹೊಂದಿದರು! ಅವರ ವೇಳಾಪಟ್ಟಿ ಅಲ್ಲಾಡಿಸಲ್ಪಟ್ಟಿತು! ಬೆಳಿಗ್ಗೆ ಮತ್ತು ಸಂಜೆಯಲ್ಲೂ ದೇವರನ್ನು ಕೊಂಡಾಡಲೂ ಹುಡುಕಲೂ ಅವರನ್ನು ಏನೋ ದೇವಾಲಯಕ್ಕೆ ಸೆಳೆಯಿತು. ಉಜ್ಜೀವನವು ಉಂಟಾಗುವಾಗ ವೇಳಾಪಟ್ಟಿ ಬದಲಾಗುತ್ತದೆ. ಇಲ್ಲಿ ನಾವು ಕೆಲಸಕ್ಕೆ ಹೋಗುವುದಿಲ್ಲ ಎಂದು ನಾನು ಹೇಳುತ್ತಿಲ್ಲ ನಮ್ಮ ದಿನನಿತ್ಯದ ವೇಳಾಪಟ್ಟಿಯನ್ನು ಪರಿವರ್ತನೆ ಮಾಡುವ ವಿಷಯಗಳು ನಡೆಯುವವು ಎಂಬುದನ್ನು ನಾನು ಹೇಳುತ್ತಿರುವುದು. ದೇವರು ನಮ್ಮ ಮಧ್ಯದಲ್ಲಿ ಚಲಿಸುವ ಒಂದು ಸಮಯದಲ್ಲಿ ನಾವು ಇದ್ದೇವೆ ಎಂಬುದಾಗಿ ತಿಳಿದು ನಾವು

ಉಜ್ಜೀವನಕ್ಕೆ ಬರಬೇಕು. ದೇವರು ಬಿಡುಗಡೆಗೊಳಿಸಲು ಇರುವುದರೊಂದಿಗೆ ನಡೆಯಲು ನಮ್ಮ ವೇಳಾಪಟ್ಟಿಯನ್ನು ಮರುಹೊಂದಾಣಿಕೆ ಮಾಡಲು ನಾವು ಸಿದ್ಧರಿರಬೇಕು. ನಮ್ಮಲ್ಲಿ ಅನೇಕರು ''ದೇವರೇ, ನಮಗೆ ಉಜ್ಜೀವನ ಬೇಕು, ಕರ್ತನೇ, ಸುರಿಸುವಿಕೆಯನ್ನು ಕಳುಹಿಸು! ದೇವರೆ ನಮಗೆ ನಿನ್ನ ಸಂದರ್ಶನ (ಭೇಟಿ) ಕೊಡು!'' ಎಂಬುದಾಗಿ ಪ್ರಾರ್ಥಿಸುತ್ತಿರಬಹುದು ಆದರೆ ದೇವರು ''ಅಭಿವ್ಯಕ್ತಗೊಳಿಸಿ'' ನಮ್ಮ ದಿನನಿತ್ಯದ ವೇಳಾಪಟ್ಟಿ ಬದಲಾಯಿಸಿದರೆ, '' ಕರ್ತನೇ ನಮಗೆ ಉಜ್ಜೀವನ ಬೇಕು ಆದರೆ ನಮ್ಮ ದಿನನಿತ್ಯದ ವೇಳಾಪಟ್ಟಿ ಮುಟ್ಟಬೇಡ ಅಥವಾ ನಮ್ಮ ಜೀವಿತಗಳನ್ನು ಭಂಗಪಡಿಸಬೇಡ'' ಎಂಬುದಾಗಿ ಹೇಳುವೆವೋ?! ಅಥವಾ ಉಜ್ಜೀವನಕ್ಕೆಂದು ಮಾಡಿದ ನಮ್ಮ ಪ್ರಾರ್ಥನೆಗಳಿಗೆ ದೇವರಿಂದ ಉತ್ತರವನ್ನು ಪಡೆಯಲು ನಾವು ನಿಜವಾಗಿ ಸಿದ್ಧವಾಗಿದ್ದೇವೋ?

## ಸಮುದಾಯದ ಪ್ರಜ್ಞೆ - ಒಟ್ಟಿಗೆ ಹಂಚಿಕೊಳ್ಳುವುದು

**ನಂಬಿದವರೆಲ್ಲರು ಒಗ್ಗಟ್ಟಾಗಿದ್ದು ತಮ್ಮದೆಲ್ಲವನ್ನೂ ಹುದುವಾಗಿ ಅನುಭೋಗಿಸುತ್ತಾ ತಮ್ಮ ತಮ್ಮ ಚರಸ್ಥಿರ ಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ ಅವರವರ ಅಗತ್ಯವಿದ್ದ ಹಾಗೆ ಹಂಚಿಕೊಡುತ್ತಾ ಇದ್ದರು** (ಅಪೊಸ್ತಲರ ಕೃತ್ಯಗಳು 2:44,45)

ಯೆರೂಸಲೇಮಿನಲ್ಲಿನ ಸಭೆಯು ಸುರಿಸುವಿಕೆಯಲ್ಲಿ ಮುಂದುವರೆಯುವಾಗ ಅಲ್ಲಿ ಗಾಢವಾದ ಸಮುದಾಯದ ಪ್ರಜ್ಞೆಯಿದ್ದುದ್ದನ್ನು ಮತ್ತು ಒಟ್ಟಿಗೆ ಹಂಚಿಕೊಳ್ಳುತ್ತಿದ್ದುದನ್ನು ನಾವು ನೋಡುತ್ತೇವೆ, ತಕ್ಷಣ ಅವರು ಒಟ್ಟಿಗೆ ಮಧ್ಯಾಹ್ನ ಮತ್ತು ರಾತ್ರಿಯ ಆಹಾರ ತೆಗೆದುಕೊಳ್ಳುತ್ತಿದ್ದರು, ಮತ್ತು ಪ್ರಾಯಶಃ ಹಿಂದೆ ತಿಳಿಯದಿದ್ದ ಜನರೊಂದಿಗೆ ಒಟ್ಟಿಗೆ ಪ್ರಯಾಣ ಸಹ ಮಾಡಿರಬಹುದು. ಈ ಜನರ ಮಧ್ಯದಲ್ಲಿ ಸಂಪೂರ್ಣವಾಗಿ ಸಮುದಾಯದ ಪ್ರಜ್ಞೆ ಉಂಟಾಯಿತು. ತಮ್ಮದೆಲ್ಲವನ್ನೂ ಹುದುವಾಗಿ ಅನುಭೋಗಿಸಿದರು ಮತ್ತು ಹಂಚಿಕೊಂಡರು ಎಂಬುದಾಗಿ ಸತ್ಯವೇದ ಹೇಳುತ್ತದೆ. ಆದುದರಿಂದ ಉಜ್ಜೀವನವು ಮಾಡುವುದೇನು? ಇದು ನಮ್ಮ ಜೀವಿತಗಳಲ್ಲಿ ಸಮುದಾಯ ಪ್ರಜ್ಞೆಯನ್ನು ಕಟ್ಟುತ್ತದೆ. ನಮ್ಮ ಪ್ರಯಾಣಗಳಲ್ಲಿ ನಾವು ಹಂಚಿಕೊಳ್ಳಲು ಪ್ರಾರಂಭಿಸುತ್ತೇವೆ ಮತ್ತು ನಮ್ಮ ಕೊಡುವಿಕೆಯಲ್ಲಿ ನಮ್ಮ ಸಹಾಯಗಳಲ್ಲಿ ಮತ್ತು ನಮ್ಮ ಒಗ್ಗಟ್ಟಿನಲ್ಲಿ ಸ್ವಯಂ ಪ್ರೇರಿತವಾಗಿರುತ್ತೇವೆ.

## ಸಭೆಯ ತ್ವರಿತ ಬೆಳವಣಿಗೆ

ಯೆರೂಸಲೇಮಿನ ಸಭೆಯು ತ್ವರಿತವಾಗಿ ಬೆಳವಣಿಗೆ ಹೊಂದಿದ್ದನ್ನು ನೋಡುತ್ತೇವೆ. ''ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು (ಅಪೊಸ್ತಲರ ಕೃತ್ಯಗಳು 2:47ಬಿ).'' ಖಚಿತವಾಗಿ ದಿನನಿತ್ಯದ ಸಂಖ್ಯೆ ನಮಗೆ ಗೊತ್ತಿಲ್ಲ ಆದರೆ ಇದು ನೂರು ಅಥವಾ ಇನ್ನೂರು ಅಥವಾ ಹತ್ತು ಇರಬಹುದು ಆದರೆ ಪ್ರತಿದಿನವೂ ಜನರು ಮಂಡಲಿಗೆ ಸೇರುತ್ತಿದ್ದರು ಎಂಬುದಾಗಿ ಸತ್ಯವೇದ ಹೇಳುತ್ತದೆ. ಪೇತ್ರನ ಮೊದಲ ಸಂದೇಶದ ನಂತರ ಒಂದೇ ದಿನದಲ್ಲಿ ಮೂರು ಸಾವಿರ ಜನರು ಸೇರಲ್ಪಟ್ಟರು (ಅಪೊಸ್ತಲರ ಕೃತ್ಯಗಳು 2:41) ಹುಟ್ಟುಕುಂಟನನ್ನು ಸ್ವಸ್ಥಮಾಡಿದನಂತರ ಮತ್ತೆ ಐದು ಸಾವಿರ ಜನರು ಸೇರಲ್ಪಟ್ಟರು (ಅಪೊಸ್ತಲರ ಕೃತ್ಯಗಳು 4:4) ಸಭೆಯ ಸ್ಫೋಟಕ ಬೆಳವಣಿಗೆ ವಾಸ್ತವಿಕವಾಗಿತ್ತು! ನಮ್ಮ ನಗರದ ಸಭೆಗಳಲ್ಲಿ ಇಂತಹ ವಿಸ್ಮಯ ಸಂಗತಿಗಳು ಜರುಗಬೇಕೆಂದು ನಾವು ಅಪೇಕ್ಷಿಸುವುದಿಲ್ಲವೋ?

## ಸಭೆಯ ಮುಂದುವರೆದ ಬೆಳವಣಿಗೆಗೆ ಕಾರಣವಾದ ಗಮನಾರ್ಹ ಅದ್ಭುತಕಾರ್ಯಗಳು

ಸಭೆಯ ಮುಂದುವರೆದ ಬೆಳವಣಿಗೆಗೆ ಗಮನಾರ್ಹ ಅದ್ಭುತ ಕಾರ್ಯಗಳು ಕಾರಣವಾದವು ಎಂಬುದಾಗಿ ನಾವು ನೋಡುತ್ತೇವೆ. ಅಲ್ಲಿ ಅನೇಕ ಅದ್ಭುತಕಾರ್ಯಗಳಿದ್ದವು. ಆದರೆ ಅಪೊಸ್ತಲರ ಕೃತ್ಯಗಳಲ್ಲಿ ಗಮನಾರ್ಹವಾದವುಗಳು ಮಾತ್ರ ನಮಗಾಗಿ ಉಲ್ಲೇಖಿಸಲ್ಪಟ್ಟಿವೆ. ನಲ್ವತ್ತು ವರ್ಷಗಳಿಂದ ಕುಂಟನಾಗಿದ್ದ ಮನುಷ್ಯನು ಗುಣಹೊಂದಿದ್ದು (ಅಪೊಸ್ತಲರ ಕೃತ್ಯಗಳು 3:1-8) ರೋಗವಿದ್ದ ಜನರ ಮೇಲೆ ಪೇತ್ರನ ನೆರಳು ಬೀಳಬೇಕೆಂದು ದೂರದಿಂದ ಬಂದಿದ್ದವರು ಗುಣಹೊಂದಿದ್ದು!

**ಇದಲ್ಲದೆ ಅಪೊಸ್ತಲರ ಕೈಯಿಂದ ಅನೇಕ ಸೂಚಕ ಕಾರ್ಯಗಳೂ ಅದ್ಬುತ ಕಾರ್ಯಗಳು ಜನರ ಮಧ್ಯದಲ್ಲಿ ನಡೆಯುತ್ತಾ ಇದ್ದವು ಮತ್ತು ಎಲ್ಲರು ಒಗ್ಗಟ್ಟಾಗಿ ಸೊಲೊಮೋನನ ಮಂಟಪದಲ್ಲಿ ಇರುತ್ತಿದ್ದರು. ಅವರ ಜೊತೆಯಲ್ಲಿರುವದಕ್ಕೆ ಮಿಕ್ಕಾದವರೊಳಗೆ ಒಬ್ಬರಿಗೂ ಧೈರ್ಯವಿರಲಿಲ್ಲ ಆದರೂ ಜನರು ಅವರನ್ನು ಬಹಳವಾಗಿ ಕೊಂಡಾಡುತ್ತಿದ್ದರು ಮತ್ತು ಇನ್ನೂ ಎಷ್ಟೋ! ಮಂದಿ ಗಂಡಸರೂ ಕರ್ತನಲ್ಲಿ ನಂಬಿಕೆಯಿಡುವವರಾಗಿ ಅವರ ಮಂಡಲಿಯಲ್ಲಿ ಸೇರಿಕೊಳ್ಳುತ್ತಿದ್ದರು. ಹೀಗಿರುವದರಿಂದ ಜನರು ರೋಗಿಗಳನ್ನು ದೋಲಿಗಳ ಮೇಲೆಯೂ ಹಾಸಿಗೆಗಳ ಮೇಲೆಯೂ ಇಟ್ಟು ಪೇತ್ರನು ಬರುವಾಗ್ಗೆ ಅವನ ನೆರಳು ಇವರಲ್ಲಿ ಯಾವನ ಮೇಲಾದರೂ ಬೀಳಲಿ ಎಂದು ಅವರನ್ನು ಬೀದಿಗೆ ತೆಗೆದುಕೊಂಡು**

**ಬರುತ್ತಿದ್ದರು. ಯೆರೂಸಲೇಮಿನ ಸುತ್ತಲಿರುವ ಊರುಗಳ ಜನರು ಸಹ ರೋಗಿಗಳನ್ನು ದೆವ್ವಗಳ ಕಾಟವಿದ್ದವರನ್ನೂ ಹೊತ್ತುಕೊಂಡು ಗುಂಪುಗುಂಪಾಗಿ ಬರುತ್ತಿದ್ದರು ಅವರೆಲ್ಲರಿಗೂ ವಾಸಿಯಾಗುವದು.** (ಅಪೊಸ್ತಲರ ಕೃತ್ಯಗಳು 5:12-16)

ನಮ್ಮ ಮಧ್ಯದಲ್ಲಿಯೂ ಸಹ ಉಜ್ಜೀವನವಾಗುವಾಗ ಇಂತಹ ಕಾರ್ಯಗಳು ಜರುಗುತ್ತವೆ. ಗಮನಾರ್ಹ ಅದ್ಭುತಗಳು ಉಂಟಾಗುತ್ತವೆ. ನಮ್ಮ ಜೀವಿತಗಳ ದಿನನಿತ್ಯದ ಅದ್ಭುತಗಳಿಗಾಗಿ ದೇವರಿಗೆ ಸ್ತೋತ್ರ ಹೇಳಬೇಕು ಆದರೆ ನಮ್ಮ ಮಧ್ಯದಲ್ಲಿ ಉಜ್ಜೀವನ ನಡೆದಾಗ ಗಮನಾರ್ಹ ಅದ್ಭುತ ಕಾರ್ಯಗಳು ಪ್ರಾರಂಭಗೊಳ್ಳುತ್ತವೆ.

## ಹಿಂಸೆ (ಉಪದ್ರವ)

ಉಜ್ಜೀವನದಲ್ಲಿರುವ ಸಭೆಯು ಹಿಂಸೆಯನ್ನು ಆಕರ್ಷಿಸುತ್ತದೆ. ಕೆಲವು ಕಾರಣಗಳಿಗಾಗಿ, ನಾವು ಸುರಿಸುವಿಕೆಯ ಮಧ್ಯದಲ್ಲಿರುವಾಗ, ಇದು ಹಿಂಸೆಯನ್ನು ಆಕರ್ಷಿಸುತ್ತದೆ. ಹಾಗಾದರೆ ನಮಗೆ ನಿಜವಾಗಿಯೂ ಸುರಿಸುವಿಕೆ ಬೇಕೋ? ಪೇತ್ರ ಯೋಹಾನರು ಹಿರಿಸಭೆಯವರಿಂದ (ಯೆಹೂದ್ಯ ಅಧಿಕಾರಿಗಳಿಂದ) ಕೊಂಡ್ಯೊಯಲ್ಪಟ್ಟು, ಯೇಸುವಿನ ಹೆಸರೆತ್ತಿ ಯಾರ ಸಂಗಡಲೂ ಮಾತಾಡಬಾರದೆಂದು ಬೆದರಿಕೆ ಹೊಂದಿದರು (ಅಪೊಸ್ತಲರ ಕೃತ್ಯಗಳು 4:17,18) ಸ್ತೆಫೆನನು ಕಲ್ಲೆಸೆದು ಕೊಲ್ಲಲ್ಪಟ್ಟನು. (ಅಪೊಸ್ತಲರ ಕೃತ್ಯಗಳು 7;58). ಸುರಿಸುವಿಕೆಯ ಮಧ್ಯದಲ್ಲಿ ಹಿಂಸೆಯು ಅಪರೂಪವಲ್ಲ ಆದರೆ ಅಪೊಸ್ತಲರು ಪ್ರತಿಕ್ರಿಯೆ ತೋರಿದ್ದನ್ನು ಗಮನಿಸಿರಿ;

**ಅದಕ್ಕೆ ಪ್ರೇತ್ರ ಯೋಹಾನರು ಅವರಿಗೆ - ''ದೇವರ ಮಾತನ್ನು ಕೇಳುವದಕ್ಕಿಂತಲೂ ನಿಮ್ಮ ಮಾತನ್ನು ಕೇಳುವದು ದೇವರ ಮುಂದೆ ನ್ಯಾಯವೋ ಏನು? ನೀವೇ ತೀರ್ಪುಮಾಡಿಕೊಳ್ಳಿರಿ; ನಾವಂತೂ ಕಂಡು ಕೇಳಿದ್ದನ್ನು ಹೇಳದೆ ಇರಲಾರೆವು ಎಂದು ಉತ್ತರಕೊಟ್ಟರು''** (ಅಪೊಸ್ತಲರ ಕೃತ್ಯಗಳು 4:19, 20)

**ಅಪೊಸ್ತಲರು ತಾವು ಆ ಹೆಸರಿನ ನಿಮಿತ್ತವಾಗಿ ಅವಮಾನ ಪಡುವದಕ್ಕೆ ಯೋಗ್ಯರೆನಿಸಿಕೊಂಡೆವೆಂದು ಸಂತೋಷಿಸುತ್ತಾ ಹಿರೀಸಭೆಯ ಎದುರಿನಿಂದ ಹೋರಟುಹೋಗಿ...** (ಅಪೊಸ್ತಲರ ಕೃತ್ಯಗಳು 5:14)

ನಾವು ಅಪೊಸ್ತಲರು, ದೇವರಿಗೆ ಪರಲೋಕವನ್ನು ಮುಚ್ಚುವಂತೆ ಹೇಳುತ್ತೇವೆ ಎಂದು ಹೇಳಲಿಲ್ಲ ಅಥವಾ ಸುರಿಸುವಿಕೆಯನ್ನು ಕಡಿಮೆಗೊಳಿಸು ಎಂಬುದಾಗಿ ದೇವರನ್ನು ಕೇಳಲಿಲ್ಲ. ಬದಲಾಗಿ ದೇವರು ಮಾಡುತ್ತಿರುವವುಗಳೊಂದಿಗೆ ಹೋಗಲು ಸಂತೋಷಪಟ್ಟರು. ಅವರು ದೇವರಿಗೆ ವಿಧೇಯರಾಗಲು ಸಂತೋಷಪಟ್ಟರು ಮತ್ತು

ಕರ್ತನಾದ ಯೇಸುಕ್ರಿಸ್ತನ ಹೆಸರಿನ ನಿಮಿತ್ತ ಹಿಂಸೆ ಪಡುವುದು ಘನತೆಯುಳ್ಳದೆಂದು ಎಣಿಸಿದ್ದರು. ನಾವು ಸಹ ಕರ್ತನಾದ ಯೇಸುಕ್ರಿಸ್ತನ ನಿಮಿತ್ತ ಹಿಂಸೆಪಡುವುದು ಘನತೆಯುಳ್ಳದೆಂದು ಎಣಿಸಬೇಕು.

ನಮ್ಮಲ್ಲಿ ಹೆಚ್ಚಿನವರು ಸುಖಕರವಾದ ಕ್ರಿಸ್ತೀಯ ಜೀವಿತವನ್ನು ಜೀವಿಸಿದ್ದೇವೆ. ಯಾವುದೇ ಹಿಂಸೆಯನ್ನು ನಾವು ಪ್ರಯಾಸದಿಂದ ನೋಡುತ್ತೇವೆ. ನಮ್ಮ ಕೆಲಸದ ಸ್ಥಳದಲ್ಲಿ ನಮ್ಮ ನಂಬಿಕೆಯ ಕುರಿತು ತಿಳಿದ ಜೊತೆ ಕೆಲಸದವನು ಮೊದಲಿನಂತೆ ನಮ್ಮ ಜೊತೆ ಕಾಫಿ ಕುಡಿಯಲು ಅಥವಾ ಮಧ್ಯಾಹ್ನ ಊಟಕ್ಕೆ ಬರುವುದನ್ನು ನಿಲ್ಲಿಸಬಹುದು ಮತ್ತು ನಮ್ಮೊಂದಿಗೆ ಮಾತಾಡದಿರಬಹುದು ಇಂತಹ 'ಸಣ್ಣ ವಿಷಯಗಳನ್ನು' ನಾವುಗಳು ಅನುಭವಿಸಿರಬಹುದು ನಮ್ಮ ನಂಬಿಕೆಯ ನಿಮಿತ್ತವಾಗಿ ನಮ್ಮ ಕೆಲಸದ ಸ್ಥಳದಲ್ಲಿ ಹಿಂಸೆಯನ್ನು ಅನುಭವಿಸುತ್ತಿದ್ದೇನೆ ಎಂಬುದಾಗಿ ನಾವು ಆಲೋಚಿಸುತ್ತೇವೆ. ಪ್ರಾಮಾಣಿಕವಾಗಿ ''ಹಿಂಸೆ'' ಎಂಬುದಾಗಿ ಕರೆಯಲ್ಪಡುವುಗಳನ್ನು ಇನ್ನೂ ಸಹ ನಾವು ನೋಡಲಿಲ್ಲ ಆದರೆ ನಾವು ''ದೇವರೇ, ನಮಗೆ ಉಜ್ಜೀವನ ಬೇಕು'' ಎಂಬುದಾಗಿ ಹೇಳಿದರೆ, ಯೆರೂಸಲೇಮಿನಲ್ಲಿನ ಸಭೆಯು ಅನುಭವಿಸಿದ ಹಿಂಸೆಗಳಂತೆಯೇ ನಾವು ಸಹ ಹಿಂಸೆಗಳ ಹೆಚ್ಚಳವನ್ನು ಎದುರಿಸಲು ಸಿದ್ಧವಾಗಿರಬೇಕು.

## ಪಾಪಕ್ಕೆ ಬಲವಾದ ನ್ಯಾಯತೀರ್ಪು

ಉಜ್ಜೀವನದ ಪರಿಸರದಲ್ಲಿ ಸಮೃದ್ಧಿಕರವಾದ ಕೃಪೆ, ಅದ್ಭುತಗಳು ಮತ್ತು ವರಗಳು ದೇವಜನರ ಮಧ್ಯದಲ್ಲಿ ಬಿಡುಗಡೆಗೊಳ್ಳುತ್ತವೆ, ಎಂಬುದು ನಮಗೆಲ್ಲಾ ಗೊತ್ತಿದೆ. ಆದರೆ ಅದೇ ಸಮಯದಲ್ಲಿ ಪಾಪಕ್ಕೆ ವಿರುದ್ಧವಾಗಿ ಶೀಘ್ರವಾಗಿ ತೀರ್ಪು ಇರುತ್ತದೆ. ನಾವು ಸುಳ್ಳು ಹೇಳಿದಾಗ ಎಷ್ಟು ಜನರು ನಮ್ಮಲ್ಲಿ ಸತ್ತು ಬೀಳುತ್ತಾರೆ? ಇದೇನಾದರೂ ಜರುಗಿದ್ದರೆ ಒಬ್ಬರೂ ಇಲ್ಲಿ ಬದುಕಿರುತ್ತಿರಲಿಲ್ಲ. ಈ ದಿನಗಳಲ್ಲಿ ವಿಶ್ವಾಸಿಗಳಾಗಿಯೂ ನಮ್ಮಲ್ಲಿ ಹಲವರು ಸುಳ್ಳು ಹೇಳುತ್ತಾರೆ, ಕದಿಯುತ್ತಾರೆ. ಆದಾಗ್ಯೂ ಯಾರೂ ಸತ್ತು ಬಿದ್ದಿಲ್ಲ! ಆದರೆ ಯೆರೂಸಲೇಮಿನಲ್ಲಿ ಉಜ್ಜೀವನವಾದಾಗ ಅನನೀಯನು ಮತ್ತು ಸಪ್ಫೈರಳು ಸುಳ್ಳು ಹೇಳಿದರು ಮತ್ತು ಅವರ ಸಭೆಯ ಕಾಣಿಕೆಯ ವಿಷಯದಲ್ಲಿ ಒಂದು ಚಿಕ್ಕ ಹೊಂದಾಣಿಕೆ ಮಾಡಿದರು ಮತ್ತು ಅವರು ಬಿದ್ದು ಪ್ರಾಣಬಿಟ್ಟರು (ಅಪೊಸ್ತಲರ ಕೃತ್ಯಗಳು 5:1-10). ಅದು ಒಂದು ಕಠೋರ ತೀರ್ಪು!

## ಪ್ರಕೃತ್ಯತೀತ ಪ್ರತ್ಯಕ್ಷಪಡಿಸುವಿಕೆ ಮತ್ತು ದೇವದೂತರ ಸಂದರ್ಶನಗಳು

ಅದ್ಭುತಕಾರ್ಯಗಳು ಮತ್ತು ಸ್ವಸ್ಥತೆಯ ಕಾರ್ಯಗಳ ಸೇರ್ಪಡೆಯಲ್ಲಿ ಪ್ರಕೃತ್ಯತೀತ ಪ್ರತ್ಯಕ್ಷಪಡಿಸುವಿಕೆ ಮತ್ತು ದೇವದೂತರ ಸಂದರ್ಶನವನ್ನು ಆದಿ ಸಭೆಯು ಅನುಭವಿಸಿತು. ಅಪೊಸ್ತಲರ ಕೃತ್ಯಗಳು 4:31 ಹೀಗೆ ವಾಖ್ಯಾನಿಸುತ್ತದೆ; '' ....ಹೀಗೆ ಪ್ರಾರ್ಥನೆ ಮಾಡಿದ ಮೇಲೆ ಅವರು ಕೂಡಿದ್ದ ಸ್ಥಳವು ನಡುಗಿತು'' ಇದು ಒಂದು ಕೇವಲ ನೆಲದ ಮೇಲಿನ ಕಂಪನವಲ್ಲ, ಆದರೆ ಅವರು ಕೂಡಿದ್ದ ಸ್ಥಳವೇ ನಡುಗಿತು. ಪ್ರಾರ್ಥನೆ ಕೂಟದಲ್ಲಿರುವಾಗ ಕಟ್ಟಡವು ನಡುಗಿದಂತೆ ನೀವು ಅನುಭವ ಪಡೆದು ಏನೂ ಬೀಳದಿರುವುದನ್ನು ಕಲ್ಪಿಸಿಕೊಳ್ಳಿರಿ, ಅಪೊಸ್ತಲರ ಕೃತ್ಯಗಳು 5:19-21 ದೇವದೂತನು ಬಂದು ಅಪೊಸ್ತಲರನ್ನು ಸೆರೆಮನೆಯಿಂದ ಹೊರತಂದನು ಎಂದು ಹೇಳುತ್ತದೆ. ಅಪೊಸ್ತಲರ ಕೃತ್ಯಗಳು 8:26 ರಲ್ಲಿ ದೇವದೂತನು ಫಿಲಿಪ್ಪನಿಗೆ ಅಡವಿಗೆ ಹೋಗು ಎಂಬುದಾಗಿ ಹೇಳಿದ್ದನ್ನು ವ್ಯಾಖ್ಯಾನಿಸಿದೆ. ಹೀಗೆ ದೇವದೂತರ ಕಾರ್ಯಚಟುವಟಿಕೆಗಳು ಮತ್ತು ದೇವದೂತ ಸೇವೆಗಳು ಈ ಸುರಿಸುವಿಕೆಯ ಮಧ್ಯದಲ್ಲಿ ಬಹಳವಾಗಿ ಇರುವುವು.

## ಆಂತರಿಕ ತೊಂದರೆ ರಹಿತವಲ್ಲ

ಸುರಿಸುವಿಕೆ ಅಥವಾ ಸಂದರ್ಶನದ ಮಧ್ಯದಲ್ಲಿ ಸಭೆಯು ಆಂತರಿಕ ತೊಂದರೆ ರಹಿತವಾಗಿರಲು ಸಾಧ್ಯವಿಲ್ಲ. ಹಲವು ಬಾರಿ ಪ್ರಬಲವಾದ ದೇವರ ಸಂದರ್ಶನದ ನಿಮಿತ್ತ ಯಾವುದೇ ವಿಧದ ತೊಂದರೆಗಳಿರುವುದಿಲ್ಲ ಎಂಬ ತಪ್ಪು ಭಾವನೆ ಹೊಂದಿರುತ್ತೇವೆ. ಅಂತಹ ಅಭಿಪ್ರಾಯಕ್ಕೆ ವಿರುದ್ಧವಾಗಿ ಯೆರೂಸಲೇಮಿನಲ್ಲಿನ ಸಭೆಯು ತೊಂದರೆಗಳನ್ನು ಅನುಭವಿಸಿತು. ವಿಧವೆಯರ ಮಧ್ಯದಲ್ಲಿನ ವಾಗ್ವಾದವು ಮೊದಲ ವಿವಾದವಾಗಿತ್ತು. ಕೆಲವು ಗ್ರೀಕ್ ಭಾಷೆಯನ್ನು ಮತ್ತು ಕೆಲವು ಇಬ್ರಿಯ ಭಾಷೆಯನ್ನು ಮಾತಾಡುವ ವಿಧವೆಯರಿದ್ದರು. ದಿನದಿನದ ಉಪಚಾರದಲ್ಲಿ ವಿಧವೆಯರನ್ನು ಸರಿಯಾಗಿ ಪರಾಂಬರಿಸುವುದಿಲ್ಲವೆಂದು ಗೊಣಗುಟ್ಟಿದರು (ಅಪೊಸ್ತಲರ ಕೃತ್ಯಗಳು 6) ಆದುದರಿಂದ ಅಲ್ಲಿ ಕಲಹ ಉಂಟಾಯಿತು. ಅಪೊಸ್ತಲರು ದೇವರ ಜ್ಞಾನದೊಡನೆ ತೊಂದರೆಯನ್ನು ಬಗೆಹರಿಸಿದರು.

ನಮ್ಮ ಉಜ್ಜೀವನದ ಮಧ್ಯದಲ್ಲೂ ಸಹ ಆಂತರಿಕ ತೊಂದರೆಗಳಿರಬಹುದು ಎಂಬುದು ಒಂದು ಅಂಶವಾಗಿದೆ. ನಾವು ಭಯಪಡದೆ ದೇವರ ಜ್ಞಾನದೊಡನೆ ಅವುಗಳನ್ನು ಬಗೆಹರಿಸಬೇಕು. ನಿಜವಾಗಿಯು ಪ್ರಮುಖವಾಗಿ ದೇವರ ವಾಕ್ಯ ಮತ್ತು

ಪ್ರಾರ್ಥನೆ ಸೇವೆಗೆ ತಮ್ಮನ್ನೇ ಮುಂದುವರೆದು ಕೊಡಬೇಕೆಂಬುದಾಗಿ ನಾಯಕರು ತೀರ್ಮಾನಿಸಿದ್ದು ಮತ್ತೊಂದು ಗಮನೀಯ ವಿಷಯವಾಗಿದೆ. ಉಜ್ಜೀವನಕ್ಕಾಗಿ ನಾಯಕತ್ವ ಒದಗಿಸುವ ನಿಶ್ಚಿತ ಪ್ರಮುಖತೆಯು ಕಡೆಗೆ ನಾಯಕರು ಕೇಂದ್ರೀಕೃತಗೊಂಡಿದ್ದರು. ದೇವರನ್ನು ಹಿಂಬಾಲಿಸುವಾಗ ನಮಗೆ ಇದು ಒಂದು ಪ್ರಮುಖ ಪಾಠವಾಗಿದೆ.

ನಾಯಕರನ್ನು ಮೇಲೆ ಏರಿಸದಂತೆ ನಾವು ಜಾಗರೂಕರಾಗಿರಬೇಕು. ಉಜ್ಜೀವನವು ಒಬ್ಬ ವ್ಯಕ್ತಿ ಅಥವಾ ಸೇವೆಯ ಕೇಂದ್ರೀಕರಣ ಸುತ್ತುವರೆದಿರಬಾರದು. ಆದಾಗ್ಯೂ ಉಜ್ಜೀವನಕ್ಕಾಗಿ ನಾಯಕತ್ವದ ಪ್ರಾಮುಖ್ಯತೆಯನ್ನು ನಾವು ಅರ್ಥಮಾಡಿಕೊಳ್ಳಬೇಕು, ನಾಯಕರು ಅವರ ಸ್ಥಾನವನ್ನು ತೆಗೆದುಕೊಳ್ಳಬೇಕು, ಅವರು ಯಾವ ಕೆಲಸಗಳನ್ನು ಮಾಡಬೇಕೆಂಬುದಾಗಿ ದೇವರು ಬಯಸುತ್ತಾನೋ ಅವುಗಳ ಮೇಲೆ ದೃಷ್ಟಿಕೋನವಿಡಬೇಕು ಮತ್ತು ಅದಕ್ಕೆ ಜವಬ್ದಾರರಾಗಿರಬೇಕು. ಇದು ಸುರಿಸುವಿಕೆಯು ವಿಸ್ತರಿಸಲು ಹೆಚ್ಚಾಗಲು ಮತ್ತು ಸೊರಗದಿರಲು ಸಹಾಯ ಮಾಡುತ್ತದೆ.

ವೇಲ್ಸ್ ದೇಶದ ಉಜ್ಜೀವನದ ಕುರಿತು ಒಂದು ದುಃಖಕರ ವಿಷಯವಿದೆ. ಈವನ್ ರಾಬರ್ಟ್ಸ್ ರವರು ಈ ಉಜ್ಜೀವನದ ಮುಖ್ಯನಾಯಕರಾಗಿದ್ದರು ಮತ್ತು ಉಜ್ಜೀವನದಲ್ಲಿ ಉಚ್ಛತೆಯಲ್ಲಿ ಪ್ರಾಧಾನ ಸ್ಥಿತಿ ತಲುಪಿದರು. ಆದರೆ ದುರದೃಷ್ಟಕರ ವಿಷಯವು ಜರುಗಿತು. ತಕ್ಷಣವಾಗಿ ಅವರು ಆ ನಾಯಕತ್ವದ ಸ್ಥಾನವನ್ನು ತ್ಯಜಿಸಿ ಹೊರ ನಡೆದರು. ಈವನ್ ರಾಬರ್ಟ್ಸ್ ಮಾನಸಿಕ ಮತ್ತು ಶಾರೀರಿಕವಾಗಿ ಬಳಲಿ ಕುಸಿದರು ಸುಟ್ಟು ಹೋದಂತಾದರು. ಬಹು ಮಟ್ಟಿಗೆ ಅದೇ ರಾತ್ರಿಯಲ್ಲಿ ನಾಯಕತ್ವದ ಸ್ಥಾನದಿಂದ ಹೊರನಡೆದರು. ಮತ್ತು ಅವರ ಉಳಿದ ಜೀವಿತವನ್ನು ಏಕಾಂತವಾಗಿ - ಬರವಣಿಗೆಯಲ್ಲಿ ಮತ್ತು ಪ್ರಾರ್ಥನೆಯಲ್ಲಿ ಕಳೆದರು. ವೇಲ್ಸ್ ದೇಶದ ಉಜ್ಜೀವನದಲ್ಲಿ ದೇವರು ಬಲವಾಗಿ ಉಪಯೋಗಿಸಿದ, ಮನುಷ್ಯನು ತುಂಬಾ ದುಃಖಕರ ಸಮಾಪ್ತಿಯೊಂದಿಗೆ ಕೊನೆಗೊಂಡನು.

ಉಜ್ಜೀವನದಲ್ಲಿ ನಾಯಕತ್ವವು ಅತಿ ಪ್ರಮುಖ. ನಾವು ನಾಯಕತ್ವವನ್ನು ಮೇಲೆರಿಸಿ ನಾಯಕತ್ವವನ್ನು ಹೊಗಳುವುದಿಲ್ಲ. ಉಜ್ಜೀವನದ ನಾಯಕತ್ವ ವಹಿಸಿರುವವರು ಏಕಾಗ್ರತೆಯಲ್ಲಿರುವುದು ಬಹಳ ಪ್ರಾಮುಖ್ಯ, ನಾವೇ ಧಗದಗಿಸುವವರಾಗಿರಬೇಕು ಮತ್ತು ಆ ಸಮಯದಲ್ಲಿ ಅದರ ಜವಬ್ದಾರಿ (ಅಧಿಕಾರ) ಹೊಂದಿರಬೇಕು. ಯಾಕೆಂದರೆ ನಮ್ಮ ಮಧ್ಯದಲ್ಲಿ ಭೂಮಿಯ ಮೇಲೆ ದೇವರು

ಬಿಡುಗಡೆ ಮಾಡುವಂತಹವುಗಳಿಗೆ ನಾವು ಹೊಣೆಗಾರರಾಗಿದ್ದೇವೆ ಎಂಬ ವಿಷಯವನ್ನು ಅರ್ಥಮಾಡಿಕೊಳ್ಳಬೇಕು.

## ಪ್ರತಿಯೊಬ್ಬರು ಅದ್ಭುತಕರವಾಗಿ ಹರಿಯುತ್ತಿರುವುದು

ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಸುರಿಸುವಿಕೆಯು ಮುಂದುವರಿದಾಗ, ಪ್ರತಿಯೊಬ್ಬರು ಅದ್ಭುತಕರವಾಗಿ ಹರಿಯುತ್ತಿದ್ದರು ಎಂಬುದನ್ನು ನಾವು ನೋಡುತ್ತೇವೆ. ಪ್ರಬಲ ಸೂಚಕಕಾರ್ಯಗಳು ಮತ್ತು ಮಹತ್ಕಾರ್ಯಗಳು, ಸ್ತೆಫನ (ಅಪೊಸ್ತಲರ ಕೃತ್ಯಗಳು 6) ಮತ್ತು ಫಿಲಿಪ್ಪನ (ಅಪೊಸ್ತಲರ ಕೃತ್ಯಗಳು), ಮೂಲಕ ಬಿಡುಗಡೆಗೊಂಡಿದ್ದರ ಕುರಿತು ನಾವು ಕೇಳಲು ಪ್ರಾರಂಭಿಸುತ್ತೇವೆ. ಯೇಸು ಕ್ರಿಸ್ತನ ಹೆಸರಿನಲ್ಲಿ ಸಭೆಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು, ಸತ್ತವರನ್ನು ಎಬ್ಬಿಸಬೇಕು, ದೆವ್ವಗಳನ್ನು ಬಿಡಿಸಬೇಕು, ರೋಗದಲ್ಲಿರುವವರನ್ನು ಗುಣಪಡಿಸಬೇಕೆಂಬುದನ್ನು ದೇವರು ನೋಡಲು ಬಯಸುತ್ತಾನೆಂದು ನಾನು ಸ್ಥಿರವಾಗಿ ನಂಬುತ್ತೇನೆ. ಈ ಪಟ್ಟಣದಲ್ಲಿ ಇರುವ ಆತನ ಜನರು ನಮ್ಮ ಪಟ್ಟಣದ ಪ್ರತಿ ಬೀದಿಯನ್ನು ಆಕ್ರಮಿಸಿಕೊಳ್ಳಬೇಕು ಮತ್ತು ದೇವರ ಮಹಿಮೆಯನ್ನು ತೋರ್ಪಡಿಸಬೇಕೆಂಬುದಾಗಿ ನೋಡಲು ಆತನು ಬಯಸುತ್ತಾನೆ. ಜನರಿಗೆ ಅಗತ್ಯವಿರುವ ಕಡೆಗಳಲ್ಲಿ, ಬೀದಿಗಳಲ್ಲಿ ಪ್ರತಿಯೊಬ್ಬ ವಿಶ್ವಾಸಿಯು ತೋರ್ಪಡಿಸಬೇಕು ಮತ್ತು ಅಂತಹ ಸ್ಥಿತಿಗೆ ಸಭೆಯನ್ನು ತರಲು ದೇವರು ಬಯಸುತ್ತಾನೆ ಮತ್ತು ಅದು ದೇವರ ಸುರಿಸುವಿಕೆಯಲ್ಲಿ ಜರುಗುತ್ತದೆ. ನೀವೂ, ನಾನೂ ಬೀದಿಚೌಕಗಳಿಗೂ ವ್ಯಾಪಾರ ಸ್ಥಳಗಳಿಗೂ ಮತ್ತು ಜನರು ಎಲ್ಲೆಲ್ಲಿ ಇರುತ್ತಾರೋ ಅಂತಹ ಸ್ಥಳಗಳಿಗೆಲ್ಲಾ ದೇವರ ಮಹಿಮೆಯನ್ನು ಕೊಂಡ್ಯೊಯಬೇಕು.

## ಅಗ್ನಿಯು ಹರಡುತ್ತದೆ

ಉಜ್ಜೀವನದ ಬೆಂಕಿಯು ಹರಡುತ್ತದೆ. ಯೆರೂಸಲೇಮಿನಲ್ಲಿ ಸೌಲನು ನಡೆಸಿದ ಹಿಂಸೆಯಿಂದ ವಿಶ್ವಾಸಿಗಳು ಚದುರಿದರು ಆದರೆ ಅವರು ಎಲ್ಲೆಲ್ಲಿಗೆ ಹೋದರೋ ಅಲ್ಲಲ್ಲಿ ಉಜ್ಜೀವನದ ಬೆಂಕಿಯನ್ನು ಕೊಂಡ್ಯೊಯ್ದರು. ಅವರು ಸಮಾರ್ಯ ಮತ್ತು ಯೂದಾಯಗಳಿಗೆ ಹೋದರು, ಆ ಸ್ಥಳಗಳು ಬೆಂಕಿ ಹತ್ತಿಕೊಂಡವು (ಅಪೊಸ್ತಲರ ಕೃತ್ಯಗಳು 8) . ಕೆಲವರು ಅಂತಿಯೊಕ್ಯಕ್ಕೆ ಹೋದರು, ಅಂತಿಯೋಕ್ಯಕ್ಕೂ ಸಹ ಬೆಂಕಿ ಹತ್ತಿಕೊಂಡಿತು. (ಅಪೊಸ್ತಲರ ಕೃತ್ಯಗಳು 11). ಸಾಮಾನ್ಯ ವಿಶ್ವಾಸಿಗಳು ಎಲ್ಲೆಲ್ಲಿ ಹೋದರೋ ಅಲ್ಲಲ್ಲಿಗೆ ಉಜ್ಜೀವನದ ಬೆಂಕಿಯನ್ನು ತೆಗೆದುಕೊಂಡು ಹೋದರು

ನಮ್ಮಲ್ಲಿ ಪ್ರತಿಯೊಬ್ಬರು ಸಹ ''ಉಜ್ಜೀವನ ಕೊಂಡೊಯ್ಯುವವರು'' ಆಗಿ ಕಂಡುಬರಬೇಕು - ದೇವರ ಸುರಿಸುವಿಕೆ ಮಧ್ಯದಲ್ಲಿ ಉಜ್ಜೀವನದ ಬೆಂಕಿಯನ್ನು ಕೊಂಡೊಯ್ಯುವವರಾಗ ಬೇಕೆಂಬುದಾಗಿ ನಾನು ನಂಬುತ್ತೇನೆ.

ಉಜ್ಜೀವನದ ಮಧ್ಯದಿಂದ ನಮ್ಮನ್ನು ಹೊರನಡಿಸುವುದು ಹಿಂಸೆಯಾಗಿರಬಹುದು ಅಥವಾ ಹಿಂಸೆಯಿಲ್ಲದಿರಬಹುದು, ಹೊಸ ಉದ್ಯೋಗವಿರಬಹುದು, ನಮ್ಮ ಉದ್ಯೋಗದ ವರ್ಗಾವಣೆ ಮುಂತಾದವುಗಳಿರಬಹುದು. ಬೆಂಗಳೂರು ಪಟ್ಟಣದಿಂದ ಹೊರಗಡೆ ಚಲಿಸಲು ಅನೇಕ ಕಾರಣಗಳಿರಬಹುದು. ಆದರೆ ನಾವು ಹೋಗುವಾಗ ದೇವರ ಸುರಿಸುವಿಕೆಯನ್ನು ನಾವು ಸಾಗಿಸುವೆವು! ನಾವು ದೇವರ ಅಗ್ನಿಯನ್ನು ಕೊಂಡ್ಯೊಯ್ಯುತ್ತೇವೆ! ಮತ್ತು ಪ್ರಪಂಚದ ಉಳಿದ ಭಾಗಗಳನ್ನು ಬೆಂಕಿಯಿಂದ ಆವರಿಸಬೇಕು ! ಅದು ಒಂದು ಸಭೆಯು ಉಜ್ಜೀವನದಲ್ಲಿ ಇರುವುದಾಗಿರುತ್ತದೆ!

ಉಜ್ಜೀವನದಲ್ಲಿ ಸಭೆಯು ಇರುವಾಗ, ದೇವರು ಮಾಡುತ್ತಿರುವವುಗಳ ಮಧ್ಯದಲ್ಲಿ ಅದು ನಮ್ಮ ದಿನನಿತ್ಯದ ಜೀವಿತಗಳನ್ನು ಮತ್ತು ನಮಗೆ ತಿಳಿದಿರುವಂತೆ ಅದು ನಮ್ಮ ಸಭೆಯ ಜೀವಿತಗಳ ಮೇಲೂ ಪರಿಣಾಮ ಬೀರುತ್ತದೆ. ಆದರೆ ಇದು ಬೇಕಾಗಿದೆ, ಸಂಪೂರ್ಣ ನಗರವು ಬದಲಾಗುವುದರಲ್ಲಿ ಪ್ರತಿಯೊಂದು ಸಹ ಲಾಭಕರವಾಗಿದೆ, ಇದು ನಿಜವಾಗಿ ದೇವರ ಸಂದರ್ಶನವನ್ನು ಹೊಂದಬೇಕಾಗಿದೆ. ನಮ್ಮ ನಗರವೇನಾದರೂ ಪ್ರಭಾವಕ್ಕೊಳಗಾಗಬೇಕಾದರೆ, ನಾವು ಈ ದಿನದಲ್ಲಿ ದೇವರನ್ನು ಹೊಂದಿರುವುದಕ್ಕಿಂತ ಅಧಿಕವಾಗಿ ದೇವರನ್ನು ಹೊಂದಿರಬೇಕು. ನಮ್ಮ ನಗರಕ್ಕಾಗಿ ಈಗಾಗಲೇ ಜರುಗಿದವುಗಳಿಗಾಗಿ ನಾವು ಕೃತಜ್ಞತೆಯುಳ್ಳವರಾಗಿದ್ದರೂ ನಮ್ಮ ನಗರದಲ್ಲಿ ಯೇಸು ಕ್ರಿಸ್ತನನ್ನು ಅರಿಯದೇ ಇರುವಂತಹ ಜನರ ಸಂಖ್ಯೆಯ ಕುರಿತು ಆಲೋಚನೆ ಮಾಡಬೇಕು. ಇನ್ನೂ ಮಿಲಿಯನ್ ಗಟ್ಟಲೆ ಜನರಿಗೆ ಕ್ರಿಸ್ತನ ಬಗ್ಗೆ ತಿಳಿದೇ ಇಲ್ಲ, ನಾವು ನಮ್ಮ ನಗರದ ಮೇಲೆ ಪರಿಣಾಮ ಬೀರಬೇಕಾದರೆ ನಾವು ಪ್ರಬಲವಾದ ದೇವರ ಸುರಿಸುವಿಕೆ ಹೊಂದಬೇಕು. ನಾವು ದೇವರ ಸಂದರ್ಶನ ಹೊಂದಬೇಕು. ಈ ದಿನದಲ್ಲಿ ದೇವರೊಂದಿಗೆ ನಡೆಯುವುದಕ್ಕಿಂತಲೂ ಅಧಿಕವಾಗಿ ದೇವರನ್ನು ನಾವು ಹೊಂದಿಕೊಂಡಿರಬೇಕು ನೀವೂ ಇದರಲ್ಲಿ ಮುಂದೊತ್ತಿಕೊಂಡು ಹೋಗಬೇಕು ಎಂಬುದು ಇದರ ಅರ್ಥವಾಗಿದೆ. ನಾವು ಪ್ರಬಲ ಉಜ್ಜೀವನ, ಮತ್ತು ಮಹತ್ತರವಾದ ಆತನ ಆತ್ಮದ ಸುರಿಸುವಿಕೆಯನ್ನು ದೇವರಿಂದ ಕೇಳಲು ಸಿದ್ದರಾಗಿದ್ದೇವೊ? ಉಜ್ಜೀವನದಲ್ಲಿರುವ ಒಂದು ಸಭೆಯಾಗಿ ನಾವು ಮುಂದುವರಿಯೋಣ!

## ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಬೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

### ಉಚಿತ ಇ-ಪುಸ್ತಕಗಳು

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

### ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು

'ಲಿವಿಂಗ್ ಸ್ಪ್ರಾಂಗ್ ಎಂಬ ಗಾಡ್ ಟವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

**ಸತ್ಯವೇದ ಶಾಲೆ**

ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚ್ಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ www.apcwo.org/biblecollege ನ್ನು ಸಂಪರ್ಕಿಸಿ.

## ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅಧ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ಉಜ್ಜೀವನವು ದೇವರ ಸಂದರ್ಶನದ ಸುಸಮಯವಾಗಿದೆ. ಇದು ಭೂಮಿಯ ಮೇಲೆ ಪರಲೋಕದ ಸುರಿಸುವಿಕೆಯ ಸಮಯವಾಗಿದೆ.

ಸಂದರ್ಶನದ ಸಮಯದ ಅವಧಿಯಲ್ಲಿ ವಿಷಯಗಳು ಭಿನ್ನವಾಗಿರುತ್ತವೆ ! ನಾವು ದೇವರು ಉಜ್ಜೀವನವನ್ನು ಕಳುಹಿಸುವಂತೆ ಸುರಿಸೋಣ ಅಥವಾ ಸಂದರ್ಶನ ನೀಡುವಂತೆ ಪ್ರಾರ್ಥಿಸುತ್ತೇವೆ. ಆದರೆ ಉಜ್ಜೀವನವು ಜರುಗುವಾಗ ನಾವು ಸಿದ್ಧರಾಗಿದ್ದೇವೋ? ಉಜ್ಜೀವನವು ನಿಜವಾಗಿ ಕಾಣಿಸಿಕೊಳ್ಳುವಾಗ ನಾವು ಸಿದ್ಧರಾಗಿರಬೇಕು!

ಉಜ್ಜೀವನವು ಉಂಟಾಗುವಾಗ ಸಭೆಯು ಯಾವ ರೀತಿ ಕಾಣಿಸುವುದು? ಪರಲೋಕದಿಂದ ಸುರಿಸುವಿಕೆ ದೇವರ ಆತ್ಮಿಕ ಸಂದರ್ಶನವಾಗುವಾಗ ನಾನು ಮತ್ತು ನೀವು ಉಜ್ಜೀವನದ ಮಧ್ಯದಲ್ಲಿದ್ದರೆ ಏನು ಸಂಭವಿಸಬಹುದು? ನಮಗೆ ಈಗ ತಿಳಿದಿರುವ ಹಾಗೆ ಆಗ ಸಭೆಯು ಕಾಣಿಸುವುದಿಲ್ಲ ಎಂಬುದು ಒಂದು ಖಚಿತವಾದ ವಿಷಯವಾಗಿದೆ. ದೇವರ ಚಲಿಸುವಿಕೆಯಿರುವಾಗ ಮತ್ತು ನಾವು ಅದರ ಮಧ್ಯದಲ್ಲಿರುವಾಗ ಸಭೆಯು ಹೇಗಿರುತ್ತದೆಂಬ ಚಿತ್ರಣ ನೀಡುವುದೇ ಈ ಪುಸ್ತಕದ ಉದ್ದೇಶವಾಗಿದೆ.

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org